(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, 2005ನೇ ಸಾಲಿನ ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

"2005ನೇ ಸಾಲಿನ ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ತಾವು ಈ ಬಿಲ್‌ನ್ನು ಕೌನ್ಸಿಲ್‌ಗೆ ಕಳುಹಿಸಬೇಕಾದರೆ ಐಪಿ ಸೆಟ್ಟುಗಳು, ಭಾಗ್ಯಜ್ಯೋತಿ ಕುಟೀರ ಜ್ಯೋತಿಗಳನ್ನು ಬಿಟ್ಟು ಎಂದು ಇಲ್ಲಿಂದ ಸೇರಿಸಿ ಕಳುಹಿಸಿಕೊಡಬೇಕು.

ಅಧ್ಯಕ್ಷರು: ಆಗಬಹುದು objects and reasons ಇದರಲ್ಲಿ ಸೇರಿಸಿ ಕಳುಹಿಸಿಕೊಡುತ್ತೇವೆ.

12. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ Administration and Development ಬಗ್ಗೆ ಮಾತನಾಡುವುದಕ್ಕೆ ನನಗೆ ಕೊನೆಯ time ನಲ್ಲಿ ಅವಕಾಶ ಕೊಟ್ಟಿದ್ದೀರಿ. ಬಹಳ ಸಂತೋಷ. Government has given very clearly here stating that 'My Government' is doing all things. ಈಗ 'ನಮ್ಮ ಸರ್ಕಾರ, ನಮ್ಮ ಸರ್ಕಾರ' ಎಂದು ಬುಕ್‌ನಲ್ಲಿ ಹೇಳಿಬಿಟ್ಟಿದ್ದೀರಿ. ನಮ್ಮ ಸರ್ಕಾರದಲ್ಲಿ ಏನೇನು ಮಾಡಿದ್ದಾರೆನ್ನುವುದು ನಿಜವಾಗಿಯೂ ನನಗೆ ಗೊತ್ತಿಲ್ಲ. ಕಳೆದ 8 ತಿಂಗಳಿಂದ ಬರೀ ಕುಡಿಯುವ ನೀರನ್ನು ಬಿಟ್ಟರೆ ಬೇರೆ ಯಾವ ಕೆಲಸವನ್ನು ನಾನು ಮಾಡಿಲ್ಲ. ದೇವರು ನಮಗೆ ಯಾವ ತರಹ ಆಶೀರ್ವಾದ ಮಾಡಿದ್ದಾನೆಂದು ತಿಳಿದು ಈಗ ನನಗೆ ನೋವು ಆಗಿದೆ. ಸರ್ಕಾರ ಏನಾದರೂ ಒಳ್ಳೆಯ ರೀತಿಯಾಗಿ ಕೆಲಸ ಮಾಡುತ್ತಾರೆ, ಜನ ಕೇಳಿದ ಕೆಲಸಗಳನ್ನು ಮಾಡೋಣವೆಂದು ನಾವು ಚುನಾವಣೆಯಲ್ಲಿ ಗೆದ್ದು ಬಂದಿದ್ದೇವೆ. I remember, ಏನೆಂದರೆ, ಮೂರು ಜನ ಸತ್ತು ಮೇಲೆ ಹೋಗಿದ್ದಾರೆ. ಸತ್ತು ಹೋದ ಮೇಲೆ ನಂತರ ಇವರನ್ನು ಸ್ವರ್ಗಕ್ಕೆ ಕಳುಹಿಸಬೇಕೋ ಅಥವಾ

ನರಕಕ್ಕೆ ಕಳುಹಿಸಬೇಕೋ ಎನ್ನುವ ಸಲುವಾಗಿ ಪರೀಕ್ಷೆ ಮಾಡಿದ್ದಾರೆ. ನೀನು ನರಕಕ್ಕೆ ಹೋಗಬೇಕಾ ಅಥವಾ ಸ್ವರ್ಗಕ್ಕೆ ಹೋಗಬೇಕಾ ಏನು ನಿನ್ನ ಸ್ಥಿತಿ ಎಂದು ಒಬ್ಬನನ್ನು ಕೇಳಿದ್ದಾರೆ. ಅಲ್ಲಿ ಯಮಧರ್ಮರಾಜನಜ ಸೆಕ್ರೆಟರಿ ಅವನ ಲೆಕ್ಕ ನೋಡಿ ಏನು ಹೇಳುತ್ತಾನೆಂದರೆ– "ಸ್ವಾಮಿ, ಇವನಿಗೆ ಮದುವೆ ಆಗಿಲ್ಲ. ಇವನು ಭೂಲೋಕದಲ್ಲಿ ಚೆನ್ನಾಗಿ ಊಟ ಮಾಡಿಕೊಂಡು ಜಾಲಿಯಾಗಿ ಸಂತೋಷವಾಗಿದ್ದ. ಇವನಿಗೆ ಮಕ್ಕಳು ಯಾರೂ ಇಲ್ಲ. ಇವನು ಸತ್ತು ಬಂದುಬಿಟ್ಟಿದ್ದಾನೆ" ಎಂದು. ಅವನಿಗೆ ಏನು ಶಿಕ್ಷೆ ಕೊಟ್ಟಿದ್ದಾರೆಂದರೆ – "ನೀನು ಅಲ್ಲಿಯೂ ಕಷ್ಟಪಟ್ಟಿಲ್ಲ, ಬರೀ ಸುಖ ಸಂತೋಷದಿಂದ ಇದ್ದೆ, ಇಲ್ಲಿ ಸ್ವಲ್ಪ ಕಷ್ಟ ಹೇಗಿದೆ ಎಂದು ನೋಡು' ಎಂದು ನರಕಕ್ಕೆ ಕಳುಹಿಸಿದ್ದಾರೆ. ಇವನು ಏನಾದರೂ ಪುಣ್ಯದ ಕೆಲಸ ಮಾಡಿದ್ದಾನೆಯೇ ಎಂದು ಇನ್ನೊಬ್ಬನ ವಿಚಾರವಾಗಿ ತನ್ನ ಸೆಕ್ರೆಟರಿಗೆ ಕೇಳಿದ. ಅವನ ಲೆಕ್ಕ ಏನೆಂದರೆ – "ಸ್ವಾಮಿ, ಇವನು ಪಾಪ, ಭೂಲೋಕದಲ್ಲಿ ಮದುವೆ ಮಾಡಿಕೊಂಡಿದ್ದಾನೆ. ಮಕ್ಕಳಿದ್ದಾರೆ, ಗುಮಾಸ್ತ ಕೆಲಸ ಮಾಡುತ್ತಿದ್ದ. ಇದು ಬಿಟ್ಟರೆ ಅವನಿಗೆ ಭೂಲೋಕದಲ್ಲಿ ಸಂತೋಷ ಅಥವಾ ಬೇರೆ ಯಾವುದೇ ಇಲ್ಲವೆಂದು ಹೇಳುತ್ತಾನೆ. ಅಯ್ಯಯೋ ಪಾಪ, ಭೂಲೋಕದಲ್ಲಿ ಮದುವೆ ಮಾಡಿಕೊಂಡಿರುವುದೇ ಬಹಳ ಪಾಪ. ಅಲ್ಲಿ ಬದುಕುವುದೇ ಕಷ್ಟ. ಆದ್ದರಿಂದ ಇಲ್ಲಿಯಾದರೂ ಸ್ವರ್ಗದಲ್ಲಿ ಸ್ವಲ್ಪ ಇವನು ಸಂತೋಷವಾಗಿರಲಿ ಎಂದು ಸ್ವರ್ಗಕ್ಕೆ ಕಳುಹಿಸಿದ್ದಾರೆ. ಈ ಇಬ್ಬರು ಹೇಳಿರುವುದನ್ನು ಕೇಳಿಕೊಂಡು ಮತ್ತೊಬ್ಬ ಏನು ಮಾಡಿದ್ದಾನೆಂದರೆ, ಒಬ್ಬಳು ಹೆಂಡತಿಯನ್ನು ಮದುವೆ ಮಾಡಿಕೊಂಡಿರುವುದಕ್ಕೆ ಸ್ವರ್ಗಕ್ಕೆ ಹೋಗಿದ್ದಾನೆಂದು ಇವನು ಸಂತೋಷದಲ್ಲಿ "ಸ್ವಾಮಿ, ನಾನು ಇಬ್ಬರು ಹೆಂಡತಿಯರನ್ನು ಮದುವೆ ಮಾಡಿಕೊಂಡಿದ್ದೇನೆ, ತುಂಬಾ ಮಕ್ಕಳಿದ್ದಾರೆ, ಬಹಳ ಕಷ್ಟಪಟ್ಟಿದ್ದೇನೆಂದು" ಹೇಳಿದ. ಅವನನ್ನು ನೋಡಿಬಿಟ್ಟು ಏನು ಹೇಳಿದ್ದಾರೆಂದರೆ, "ನಿನಗೆ ನರಕಕ್ಕೆ ಕಳುಹಿಸುವುದಕ್ಕೆ chance ಇಲ್ಲ, ಸ್ವರ್ಗಕ್ಕೂ chance ಇಲ್ಲ. ಒಬ್ಬಳು ಹೆಂಡತಿಯನ್ನು ಸಾಕುವುದಕ್ಕೇ ಕಷ್ಟವಿದೆಯೆಂದು ಎಲ್ಲರಿಗೂ ಗೊತ್ತಿದ್ದರೂ ನಿನಗೆ ಅಷ್ಟು ಕೊಬ್ಬು ಇದ್ದುದ್ದರಿಂದ ಇಬ್ಬರನ್ನು ಮದುವೆ ಮಾಡಿಕೊಂಡಿರಬಹುದು. ಆದ್ದರಿಂದ ನೀನು ಇಬ್ಬರು ಹೆಂಡತಿಯನ್ನು ಮದುವೆ ಮಾಡಿಕೊಂಡಿದ್ದೀಯಾ ನಿನಗೆ ಇಲ್ಲಿ ಜಾಗವಿಲ್ಲ. ನೀನು ಕಷ್ಟಪಟ್ಟು ಬೇಕಾದಷ್ಟು ಕೂಗಾಡಬೇಕೆಂದರೆ, direct ಆಗಿ Karnataka Assembly ಗೆ ಹೋಗು ಎಂದು ಇಲ್ಲಿಗೆ ಕಳುಹಿಸಿದ್ದಾರೆ ಸ್ವಾಮಿ. ಅದಕ್ಕೆ ಇಲ್ಲಿ ಬಂದಿದ್ದೇನೆ. ಪೂರ್ತಿ ಕಷ್ಟ ಅನುಭವಿಸಿಬೇಕೆಂದರೆ, ಅಲ್ಲಿ ಹೋಗಿ ಕೂಗಾಡಬೇಕು, ನಿನಗೆ ಏನೂ ಸಿಕ್ಕುವುದಿಲ್ಲ, ನಿಮ್ಮ ಜನ ಬೈಯ್ಯಬೇಕು, ಪೂರ್ತಿ ಎಲ್ಲಾ ಆಶೀರ್ವಾದ ನಿನಗೆ ಬರಬೇಕೆಂದರೆ ಇನ್ನೊಂದು ಸಲ ನೀನು ಕರ್ನಾಟಕ ಅಸೆಂಬ್ಲಿಗೆ ಹೋಗು ಎಂದು ಕಳುಹಿಸಿದ್ದಾನೆ. ಈಗ ನಾನು ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಮಾತನಾಡಬೇಕು. ಮಾನ್ಯ ಅಧ್ಯಕ್ಷರೆ, ಪೊಲೀಸ್ ಇಲಾಖೆಯ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಬಹಳ ಗಂಭೀರವಾದ ಅಂಶವನ್ನು ಹೇಳಿದ್ದಾರೆ. Vigorous programme will be there. ಅತೀ ವೇಗವಾಗಿ ಅದು ಯಾವ ತರಹ vigorous ಎನ್ನುವುದು ನನಗೆ ಗೊತ್ತಿಲ್ಲ. 100 ಮಿಟರ್ಸ್ ತರವೇ, 200 ಮಿಟರ್ಸ್ ತರವೇ, ಅಷ್ಟು vigorous ಆಗಿ police van, ಪೊಲೀಸ್ ಇಲಾಖೆಗೆ vigorous ಆಗಿ development, modification, scientific, ಯಾವುದು scientific ಯಾವುದು modification ಯಾವ high technology ನಲ್ಲಿ ಮಾಡಿದ್ದಾರೆನ್ನುವುದು ನನಗೆ

ಗೊತ್ತಿಲ್ಲ. ಟಿಪ್ಪು ಸುಲ್ತಾನ್ ಕಾಲದಲ್ಲಿದ್ದಂಥ ಜೀಪು ಇಟ್ಟುಕೊಂಡು ಅದರಲ್ಲಿ ಖೈದಿಗಳನ್ನು custody ಗೆ ತೆಗೆದುಕೊಂಡು ಕೋರ್ಟ್‌ಗೆ ಹೋಗುತ್ತಾರೆ. ಅದನ್ನು ನೋಡಿದರೆ ನನಗೆ ನಾಚಿಕೆಯಾಗುತ್ತದೆ. ಆ ವ್ಯಾನ್‌ಗಳು ರೋಡ್‌ನಲ್ಲಿ ಓಡುವುದೇ ಇಲ್ಲ. Custody ನಲ್ಲಿ ಹೋಗುವವರನ್ನು ತಳ್ಳಿಕೊಂಡು ಹೋಗುತ್ತದೆ. ಇದು ಟೆಕ್ನಾಲಜಿನಾ, ಇಲ್ಲ ಹೊಸದು ಯಾವ ಟೆಕ್ನಾಲಜಿ ಎಂಬುದು ನಮಗೆ ಅರ್ಥವಾಗಲಿಲ್ಲ. ಹೆಲಿಕ್ಯಾಪ್ಟರ್ ಏನಾದರೂ ತೆಗೆದುಕೊಂಡು ಬರುತ್ತೀರಾ ಕಸ್ಟಡಿಗಳನ್ನು ತುಂಬಿಕೊಂಡು ಹೋಗುವುದಕ್ಕೆ ಆ ಡಿಪಾರ್ಟ್‌ಮೆಂಟಿನೇಟ್ಸ್ ಕೊಟ್ಟಿದ್ದಾರೆ. There is very peace now in Karnataka. ಏಕೆಂದರೆ, ವೀರಪ್ಪನ್ ತೀರಿ ಹೋದ ಮೆಲೆ, there is very peace in this State. ಕೊಟ್ಟಿದ್ದರು. ಅಲ್ಲವಾ? ಸಾರ್, ಅಂದ್ರೆ ಇನ್ನೊಬ್ಬ ವೀರಪ್ಪನ್ ಬರುವುದಿಲ್ಲ, ಊರಿನಲ್ಲಿ ನಕ್ಸಲೈಟ್ ಇರುವುದಿಲ್ಲ. ರೌಡಿಗಳನ್ನು ಇರುವುದಿಲ್ಲ; ಡಿಪಾರ್ಟ್‌ಮೆಂಟನ್ನೇ ಕ್ಲೋಸ್ ಮಾಡಿಬಿಡಿ. ಏತಕ್ಕೆ ಹೈ-ಟೆಕ್ನಾಲಜಿ. ಪೊಲೀಸ್ ನಿಮ್ಮದು. ರೌಡಿ ಇಲ್ಲ. ಇವರು ಅವರನ್ನು ಸುಮ್ಮನೆ ಇದ್ದರೆ, ಕೆಲಸವಿಲ್ಲವೆಂದರೆ, ಏನಾದರೂ ಒಂದು ಪಿಕ್-ಪಾಕೆಟ್ ಮಾಡು ಎನ್ನುವುದು, ಅಂಡರ್‌ಗ್ರೌಂಡ್ ಹೋಗಿ ಮಣ್ಣು ತೆಗೆದುಕೊಂಡು ಬನ್ನಿ ಎನ್ನುವುದು ನಮ್ಮ ಜನ ತಪ್ಪು ಮಾಡುವುದಿಲ್ಲ. ಸುಮ್ಮನೆ ಇರುವವರನ್ನು ಮುಚ್ಚಿರುವ ಗಣಿಗೆ ಇವರನ್ನೇ ಕಳುಹಿಸಿ, ಮಣ್ಣು ತೆಗೆದುಕೊಂಡು ಅರ್ಧ ಅರ್ಧ ಬನ್ನಿ ಫಿಫ್ಟಿ ಪರ್ಸೆಂಟ್ ನಮ್ಮ ಸ್ಥಿತಿ ಹಾಗಿದೆ. ಪೊಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಡೆವಲಪ್‌ಮೆಂಟ್ ಇಷ್ಟೂ ಮಾಡುತ್ತಿದ್ದಾರಂತೆ. Government order is there. You are well aware, my Deputy Chief Minister; In any department for more than 5 years, you don't allow ಅವನನ್ನು ಷಿಫ್ಟ್ ಮಾಡುತ್ತೀರಿ. ಈ ಡಿಪಾರ್ಟ್‌ಮೆಂಟಿನಲ್ಲಿ 15-20 ವರ್ಷ ಅಲ್ಲೇ ಕುಳಿತುಕೊಂಡಿದ್ದಾರೆ. ಆ ಕೇಸ್ ವರ್ಕರ್ ಸೆಕ್ಷನ್ ಆಫೀಸರ್, ಸೂಪರಿಂಟೆಂಡೆಂಟ್ ಎಲ್ಲಾ. ಅವರನ್ನು ಸ್ವಲ್ಪ ಶಿಫ್ಟ್ ಮಾಡಲೇಬೇಕು. On omission and commission basis, they are sitting there. If they go on sitting in the Police Department, how are going to just curb the corruption in this Department? ಇದೊಂದು ಪೊಲೀಸ್ ಮೇಲೆ ಕೊಟ್ಟಿದ್ದೇನೆ, ಅದನ್ನು ಹೇಗೆ ಡೆವಲಪ್ ಮಾಡುತ್ತೀರೋ ನನಗೆ ಗೊತ್ತಿಲ್ಲ. It is an example. I will appreciate, what the improvements my Government have done it. ಸಾರ್, ನೀವು ಇಷ್ಟೆಲ್ಲಾ ಕೊಟ್ಟಿದ ಮೇಲೆ, KGF is a police district, from independence KGF is a separate district. Your law says that if there is more than 50,000 population, you must give traffic police in the city. The entire KGF city has got 2 lakh population. So far there is no traffic police at all. Where is your administration, Sir? The KGF city police don't have a traffice police. ಆ ಅಧಿಕಾರಿಗಳು ನಿಮ್ಮ ನೋಟೀಸಿಗೆ ತೆಗೆದುಕೊಂಡು ಬಂದಿಲ್ಲವೇ? OR whether you are not interested? Where is the administration in this Government? ಪ್ರತಿಯೊಂದು ಡಿಸ್ಟಿಕ್ಟ್‌ಗೂ ಟ್ರಾಫಿಕ್ ಪೊಲೀಸ್ ಇರಲೇಬೇಕು. Such being the case, KGF is having

district police, still we don't have traffic police at all. Any doubt? KGF is having a separate district police. In administration it is Kolar. ಹೌದು ಎಂದು ಹೇಳಬಾರದು. ತಿಳಿದುಕೊಳ್ಳಬೇಕು. We are a special area. We have a separate IPS Officer, Superintendent of Police. The Government should come forward. At least before doing that vigorous work, very slowly like a tortoise, please push in the traffic police in KGF, Secondly, ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ಹೇಳುತ್ತೇನೆ, ಲ್ಯಾಂಡ್ ಅರ್ಧ ಎಕರೆ, ಒಂದು ಎಕರೆ ಕೊಡುವುದಕ್ಕೂ ಡೆಪ್ಯುಟಿ ಕಮಿಷನರ್ ನಾವು ಸರ್ವೆ ಮಾಡಬೇಕು, ಸೂಪರ್‌ವೈಜ್ ಮಾಡುತ್ತೇವೆ ಇದನ್ನೆಲ್ಲಾ ಹೇಳಿದರು. Sir, I have put a question also. I have not received reply. In how many departments, you can put the Deputy Commissioner as the head of the department? ಪ್ರತಿಯೊಂದಕ್ಕೂ ಟಾಸ್ಕ್‌ಫೋರ್ಸ್ ಡ್ಯೂಟೀಸ್ ಇದೆ, ಆಶ್ರಯ ಕಮಿಟಿ ಡ್ಯೂಟೀಸ್ ಇದೆ. ಮುನಿಸಿಪಾಲಿಟಿ ಪ್ರತಿಯೊಂದಕ್ಕೂ ಡಿಸಿ ಮೇಲೆ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಹಾಕಿದರೆ ಹೇಗೆ? For the Survey Department, you have said that the Deputy Commissioner will enfore supervison of both Revenu and Survey work at the district livel. Don't you believe your Survey Director, Assistant Director? You are doing discrimination. That means you believe only your bureaucrats. ಸರ್ವೆ ಮಾಡುವ ಬಗ್ಗೆ ಡೆಪ್ಯುಟಿ ಕಮಿಷನರ್‌ರವರು ಟೆಕ್ನೋಕ್ರಾಟ್ಸ್‌ನಲ್ಲಿ ಎಕ್ಸ್‌ಪರ್ಟ್ ಆಗಿದ್ದಾರೆಯೇ? You are not believing your own technocrats, your engineers, your surveyors. ಏತಕ್ಕೆ ಪ್ರತಿಯೊಂದನ್ನೂ ಅವರ ತಲೆ ಮೇಲೆ ಹಾಕುತ್ತೀರಿ ಗೊತ್ತಿಲ್ಲ ಪಾಪ. ನನಗೆ ಡೆಪ್ಯುಟಿ ಕಮಿಷನರ್‌ರವರ ಮೇಲೆ ಅಪಾರ ಪ್ರೀತಿ. ಹೋಗಿ ಕೇಳಿ ಬೇಕಾದರೆ. ಹೋಗಿ ಕೇಳಿದ ತಕ್ಷಣ, ಟಾಸ್ಕ್‌ಫೋರ್ಸ್‌ನಲ್ಲಿ 20 ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿಗೆ ಹಾಗೇ ತೆಗೆದುಕೊಂಡು ಹೋಗಿ ಕೊಡುತ್ತಾರೆ. ಹೋಗಿ ಕೇಳಿದ ತಕ್ಷಣ ಕೆರೋಸಿನ್ ಇಲ್ಲ ನಮ್ಮ ಊರಿನಲ್ಲಿ, ಬಡವರು, ಅದನ್ನು ಬಿಟ್ಟರೆ ಜೀವನ ಮಾಡುವುದಕ್ಕಾಗುವುದಿಲ್ಲವೆಂದರೆ, ತಕ್ಷಣ 10,000 ಲೀಟರ್‌ಗೆ ಆರ್ಡರ್ಸ್ ಪಾಸ್ ಮಾಡುತ್ತಾರೆ, ಒಂದು ಪೇಪರ್ ಮೂವ್ ಮಾಡುವುದಕ್ಕೂ ಈ ಸದನದಲ್ಲಿ 5 ವರ್ಷ ಕಂಪ್ಲೀಟ್ ಮಾಡಬೇಕು. That is the administration of the Deputy Commissioner in the State. ಹೆಸರಿದೆ. ಒಳ್ಳೆಯ ಹೆಸರಿದೆ. I have brought to the notice of my Deputy Commissione for a simple work for drinking water. For more than 30 or 40 years, the Water Board is holding a water pump in the place and a borewell is also located in a place. Immediately after getting CM fund, we have put one more borewell. The land owner says it belongs to him and it is not the Government land. ತಹಶೀಲ್ದಾರ್ ನೋಟೀಸ್ ತೆಗೆದುಕೊಂಡು ಬಂದಿದ್ದೆವು. ಕುಡಿಯುವ ನೀರಿಗೆ ಇಷ್ಟು ಅನ್ಯಾಯ

ಮಾಡುತ್ತಿದ್ದಾರೆ. Already there is a borewell and a water pump which are located for more than 30 years, which was utilised in the water house. ಡೆಪ್ಯುಟಿ ಕಮಿಷನರ್ ವಿಚಾರಣೆ ಮಾಡುತ್ತೇನೆಂದರು. ಅವರು ಕೆಲಸವನ್ನೇ ಮಾಡಿಲ್ಲ, ಜನರಿಗೋಸ್ಕರ ನಾನು ಹೋಗಿ, I met the Tahasildar. I asked him to whom this land belongs. He said, "ಇದು ಸರ್ಕಾರದ ಕೆರೆ. ಸರ್ಕಾರಿ ಜಾಗ. Taluk Magistrate has given. I have brought it to the notice of the Deputy Commissioner. ಪುನಃ ಮತ್ತೆ ನೋಡಿ ಸ್ವಾಮಿ ಇದು ಸರ್ಕಾರಿ ಜಮೀನೆಂದು ಹೇಳುತ್ತಾರೆ, ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರೆ, `I will look into this place' He sais this before 4 months back. Still he is looking. I have come to this place. For a simple work. He can dicate an order to the Assistant Commissioner or to the Tahsildar or to the Municipal Commissioner or destroy the area, which he has not. What is the use of talking on the floor of this House, My Deputy Chief Ministe, you tell me Sir. Now, I am bringing it to the notice of my Yuvaraj. Unfortunately, the Maharaj was not there. There are two Government. One is Maharaj Government. The other is Yuvaraj Government. But, you will not be Yuvaraj. Don't worry. You will be Maharaj always. Unfortunately, in your party some youngsters will be Yuvaraj, to just sit in the Maharaj seat. But, we expect you be Maharaj. A time will come. Till then, this Maharaj should watch everyday, not to allow the seat of Maharaj, but to do the administration powerfuly. We are not aware of much administration. We are just small people, MLAs. That is all. My people have given that opportunity to me only we can just plead. Only we can request. But, we cannot command. ಶ್ರೀಮಾನ್ ಯಡಿಯೂರಪ್ಪನವರು ಕಮಾಂಡ್ ಮಾಡಬಹುದು. He has majority of seats. I don't know. ನಾವು ನಿಮ್ಮ ಜೊತೆಯಲ್ಲಿರುತ್ತೇವೆ. ನಿಮ್ಮ ಜೊತೆಗೇ ಇರಬೇಕು. ಅವರ ಜೊತೆಯಲ್ಲಿರಬೇಕು. ನಮ್ಮ ಗತಿಗಳಿಗೇನಾಗಿದೆ ನೋಡಿ ಸ್ವಾಮಿ. ಇವರ ಜೊತೆಯಲ್ಲಿಲ್ಲವೆಂದರೆ ಇವರು ಸಪೋರ್ಟ್ ಮಾಡುವುದಿಲ್ಲ, ನಿಮ್ಮ ಜೊತೆಯಲ್ಲಿಲ್ಲವೆಂದರೆ ನೀವು ಸಹಾಯ ಮಾಡುವುದಿಲ್ಲ. ಇಷ್ಟನ್ನೂ ಮಾಡಿಕೊಂಡು ಹೋದರೆ ಅಧಿಕಾರಿಗಳು ನಮ್ಮನ್ನು ನೋಡುತ್ತಾರಾ? ಸಿಂಪಲ್ ಒಂದೇ, ಇನ್ನೂ ಎಷ್ಟು ತಿಂಗಳು ಇರುತ್ತದೆ? ಎಷ್ಟು ತಿಂಗಳಿರುತ್ತದೆಂದರೆ, ನೀವು ಎಷ್ಟು ತಿಂಗಳಿರುತ್ತೀರಿ ನೀವು ಶಾಸಕರಾಗಿರುವುದಿಲ್ಲ. What you can do? All these things. It may be sometimes joke. But, we feel. We are fighting with the people. ಅಧಿಕಾರಿಗಳು ತೆಗೆದುಕೊಳ್ಳಲಿ. There is an example. I have asked to my

Ministers to come to my place for a road pooja. But, my Ministers were afraid. ಅವರು ಕನ್ಸಲ್ಟ್ ಮಾಡಿದರು, ಎಲೆಕ್ಷನ್ ಅನೌನ್ಸ್ ಮಾಡಿದರು, ನಾವು ಬರುವುದಕ್ಕಾಗುವುದಿಲ್ಲವೆಂದು ಹೇಳಿದರು. ಸಾರ್, ಇದು ಸಿಟಿಗಲ್ಲ, ರೂರಲ್‌ಗೆ ಎಂದೆ. ಇಲ್ಲ, ನಾವು ಮಂತ್ರಿಗಳು throughout Karnataka ಅಂದರು. So, I requested my Deputy Commissioner. Immediately, he says, 'No, no. Sorry. ಎಲೆಕ್ಷನ್ ಅನೌನ್ಸ್ ಆಗಿದೆ, ಚುನಾವಣೆ ಬರುತ್ತಿದೆ, ಕೋಡ್ ಆಫ್ ಕಾಂಡಕ್ಟ್ ಆಗುತ್ತದೆಂದರು. Immediately, within two minutes, he says, 'Code of conduct' Same person, the Deputy Commissioner is the Election Commissioner. ಎಲೆಕ್ಷನ್ ಕಮಿಷನರ್ ಬಂದರೆ ಇವರು ಸ್ಟೈಲ್‌ಗಳು, ಇವರ ಆಕ್ಷನ್‌ಗಳು Code of conduct has got nothing to do it. ಎಲೆಕ್ಷನ್ ಬರುವುದಿಲ್ಲವೆಂದರೆ, ಕೋಡ್ ಆಫ್ ಕಾಂಡಕ್ಟ್ ತರಹ ಏಕೆ ಕೆಲಸ ಮಾಡಬಾರದು? Same man only, you know. Only the name is changed. ಎರಡು ಕಣ್ಣು, ಕಾಲು, ಮೂಗು ಅದೇ ಮನುಷ್ಯ. ಸುಮ್ಮನೆ, ಹೆಸರಿಗೆ ಮಾತ್ರ ಎಲೆಕ್ಷನ್‌ಕಮಿಷನ್ ಕೊಟ್ಟಿದೆ ತಕ್ಷಣ, ನೋ, ನೋ, ಕಾನೂನು ಮೀರಿ ಮಾಡುವುದಕ್ಕೆ ಆಗುವುದಿಲ್ಲ. What is this ಕಾನೂನು? Same thing. When you are earning so much, using the red light car, all officials steno, typist, everything; not even one rupee from your pocket utilising for the service. Whereas we have to purchase every pin. We have to put fule and come when we meet the Deputy Commissioner in their place. So much when we are spending and participating in the administration, very casual they say," ಈಗ ಅದನ್ನು ಮಾಡುವುದಕ್ಕಾಗುವುದಿಲ್ಲ, ಎಲೆಕ್ಷನ್ ಡಿಕ್ಲೇರ್ ಆಗಿದೆ ಎಂದು ನೀವು ಸುಮಾರು 34 ತಿಂಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲವೆಂದು ಕೇಳಿದರೆ, ಅವರ ಜೊತೆಗೆ, ಕೆಜಿಎಫ್‌ನಲ್ಲಿ ಕೆರೋಸಿನ್ ಇಲ್ಲ, BGML ಮುಚ್ಚಿದೆ, ಪವರ್ ಇಲ್ಲ, ನಮ್ಮ ಸ್ಥಿತಿ ಹೀಗಿದೆ ಎಂದರೆ he cannot able to just provide 4,000 litres of kerosene to my place. Such a Deputy Commissioner, not only my Deputy Commissioner, I am talking about Deputy Commissioners generally. ಅವರ ಮೇಲೆ ಸರ್ವೆ ಮಾಡುವುದಕ್ಕೆ ಹಾಕಿದ್ದೀರೆಂದರೆ ಮತ್ತೆ ಅವರೇನು ಕೆಲಸ ಮಾಡುವುದಕ್ಕಾಗುತ್ತದೆ ಪ್ರತಿಯೊಂದಕ್ಕೂ ಲೀಡ್ ಬ್ಯಾಂಕ್ ಮ್ಯಾನೇಜರ್ ಬಂದರೆ, ಮೀಟಿಂಗ್ ಮಾಡಿ, ಎಸ್‌ಸಿ:ಎಸ್‌ಟಿ ಲೋನ್ ಕೊಡುವುದಕ್ಕೆ ಬ್ಯಾಕ್‌ವರ್ಡ್ ಕ್ಲಾಸರೆ ಲೋನ್ ಕೊಡಬೇಕೆಂದರೆ, ಡೆಪ್ಯುಟಿ ಕಮಿಷನರ್. ಅವರು ಯಾವ ಕೆಲಸ ಮಾಡುತ್ತಿದ್ದಾರೆ? ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆ ಎಂದರೆ, Just for name sake you are saying. The Deputy Commissioner is the head of the Department. Which work you have done for the past 8 months? You have not done. There is corruption wherever we go. We have seen this. That should be not be in this Government. They should

curbed ಒಳ್ಳೆಯ ಕೆಲಸ ಮಾಡುವುದಕ್ಕೆ ಕಮಿಷನ್ ಕೊಡಬೇಕು, 4–4–8 ಅಂದರೆ ಅದಕ್ಕೂ ಕಮಿಷನ್ ಕೊಡಬೇಕು, ಕಮಿಷನ್ ಕೊಡುವುದಿಲ್ಲವೆಂದರೆ 4–4–9 ಆಗುತ್ತದೆ. Where is the administration? How we, the people can just come forward and do the development in your place? The, you have given very proudly about health. ಹೆಲ್ತ್ ಬಗ್ಗೆ ಬಹಳ ಗಂಭೀರವಾಗಿ ಹೇಳಿದ್ದೀರಿ.

> "It gives me immense pleasure to inform the Hon'ble Members that the most innovative cooperative health scheme for farmers popularly known as "Yeshasvini" has been hailed not only in Karnataka but all over the country and abroad as the best conceived health scheme for the poor farmers."

Appreciate. Yeshasvini, very good. ಎಲ್ಲಾ ಹೆಸರುಗಳು ಚೆನ್ನಾಗಿವೆ ಹೆಸರುಗಳು ಮಾತ್ರ, ಸುಮ್ಮನೆ ಹೇಳಬಾರದು. Beautiful names. But, no smell. What is the use? ಹೆಸರುಗಳು ಚೆನ್ನಾಗಿವೆ, ಹೆಸರುಗಳನ್ನು ಇಟ್ಟಿರುವುದೆಲ್ಲಾ ಬಹಳ ಚೆನ್ನಾಗಿವೆ. ಬಟ್ ಸ್ಮೆಲ್ಲೇ ಇರುವುದಿಲ್ಲ. ಕೆಲವು ಫೋಟ್ಸ್‌ಗಳನ್ನು ನೀವು ನೋಡಿದರೆ, May be jackfruit. ನೋಡಿದರೆ ಪೇಲೆ ಹೇಗೆ ಇದೆ. But inside it is very sweet, very tasty. ಮೇಲೆ ಲೋಕೇಷನ್ ಮಾತ್ರ ಸರಿಯಾಗಿ ಇರುವುದಿಲ್ಲ, ತಮ್ಮ ತರಹ ಗಡ್ಡ ಗಿಡ್ಡ ಇರುತ್ತದೆ, But you are like a jackfruit. No doubt. No doubt. Not like me. It is just like you. So, we can compare ourselves to jackfruit. No doubt.

> "The State Government has now decided to extend the concept of "Yeshasvini" to the agricultural labourers and unorganised sector labourers."

Have you ever thought it in my place, KGF? About 4000 to 5000 members have lost their labour. Sir, my in charge Minister also should listen. They say 'unorgaised sector labour'. Already they have lost jobs. For more than 5 years, no salary, no VRS amount. What must the health hazard? It is located on 12,000 acres of land covered by the broken rocks and cynide. Have you ever bothered? What is your Director and the Secretary doing? Why they not brought to your notice? It is not only the question whatever the Secretary plan and what the Minister says. It has to be scrutinised thoroughly. Inefficient administration is going on in your Government. Why have not brought

to your notice? How many times I can say? A number of times I have requested and begged. Only thing is that I should come forward to touch all your legs to develop my KGF. Dont' feel? ಅಷ್ಟು ಮಟ್ಟಕ್ಕೆ ಹೋಗಿ ನಾನು ನನ್ನ ಕೆಜಿಎಫ್ ಡೆವಲಪ್ ಮಾಡಬೇಕು ಎಂದರೆ, ನಾವು ಏಕೆ ಕರ್ನಾಟಕ ಸರ್ಕಾರ ಎಂದು ಹೇಳಬೇಕು? ನೀವು ಅಮೇರಿಕಾದಲ್ಲಿ ಇರಬೇಕು, ಸ್ವಾಮಿ ನನ್ನ ಕೆಜಿಎಫ್ ಹೀಗೆ ಆಗಿದೆ, ನೀವು ಲಂಡನ್‌ದಲ್ಲಿ ಇದ್ದಿರಬೇಕು. Are you not the citizens of this country? We talk about Himalaya and a tell ocean of lies. ಹಿಮಾಲಯದ ತರಹ ಮಾತನಾಡಿ ಸಮುದ್ರ ತರಹ ಸುಳ್ಳು ಹೇಳುತ್ತೀರಿ; ಏನು ಹೇಳುವುದು ನಾವು, ನಮ್ಮ ಸರ್ಕಾರ ಷೆಡ್ಯೂಲ್ಡ್ ಕ್ಯಾಸ್ಟ್ ಪರ, ಹೇಗೆ ಪರ? ಪರದೇಶಿಗಳಾಗುತ್ತಿದ್ದೇವೆ. ಎಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಡೆವಲಪ್ ಆಗುವುದು? There is 2 laksh population in my place. Very proudly you are saying in this. 'My Government has given this health programme. 'You should have taken this programme to KGF. A beautiful hospital is locked. Let my Minister come and say that I am just bringig false information to this House. Such a beautiful hospital which you cannot find in the district of Kolar. Can't you feel like this? ನೀವು ಮಾಡುವುದಿಲ್ಲ ಹೊಸದನ್ನು ಹೇಳಿ ಎಲ್ಲಾ ಪ್ಲಾನ್ ಮಾಡುತ್ತೀರಿ ದುಡ್ಡು ಲೂಟಿ ಮಾಡುವುದಕ್ಕೆ, Yes, definitely. Crystal clear Government should be there. Transparency should be there. ಆದ ತಕ್ಷಣ ಪ್ಲಾನ್ ಎಲ್ಲಾ ಮಾಡುತ್ತಾರೆ ಒಳ್ಳೆಯ ರೀತಿಯಾಗಿ ಮಾಡುತ್ತಾರೆ, ಅದನ್ನು ಉಪಯೋಗ ಮಾಡುವುದಿಲ್ಲವಂತೆ, ಏಕೆ ಇದನ್ನು ಉಪಯೋಗ ಮಾಡಬಾರದು? You should have taken this. You could have spent small money. You could have done big work, which you have failed BGML belongs to Government of India. We are in Karnataka covered with the Indian culture, not in London. ಕೇಂದ್ರ ಸರ್ಕಾರ ಕಾಂಗ್ರೆಸ್ ಸರಕಾರ. They are not Communist sarkar. They are not Rebpulican of American sarkar.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು): ಇರುವ ಸರ್ಕಾರಗಳಿಗೆ ಬೇಜಾರಾಗಿಬಿಡುತ್ತದೆ. ತಾವು ಆ ರೀತಿ ಮಾತನಾಡಿದರೆ.

SRI S. RAJENDRAN: I have seen Sri Vaijanath Patil when he was the Minister. ಪಾಪ ಅವರು ಸಂತೋಷದಿಂದ ನಿದ್ರೆ ಮಾಡುತ್ತಿದ್ದಾರೆ. ಈ ಜಾಗದಲ್ಲಿ ನಿದ್ರೆ ಬರುವುದು ಎಂದರೆ ಎಷ್ಟು ಸಂತೋಷ, ಸ್ವರ್ಗದಲ್ಲಿ ಇರುವ ತರಹ...

ಅಧ್ಯಕ್ಷರು: ರಾಜೇಂದ್ರನ್‌ರವರೇ ಸ್ವಲ್ಪ ಬೇಗ ಮುಗಿಸಿ.

ಶ್ರೀ ಸಿ.ಬಿ. ಕೃಷ್ಣಬೈರೇಗೌಡ: ನಮ್ಮ ಆತ್ಮೀಯರಾದಂಥ ರಾಜೇಂದ್ರನ್‌ರವರು ಇಂಗ್ಲೀಷ್‌ನಲ್ಲಿ ಎಂ.ಎ. ಮಾಡಿದ್ದಾರೆ, ಎರಡೂ ವರ್ಷ ಏನು ಇಂಗ್ಲೀಷ್‌ನಲ್ಲಿ ಎಂ.ಎ. ಮಾಡಿದರೂ ಇಲ್ಲಿ ಎಲ್ಲಾ

ಭಾಷಣ ಬಿಗಿಯುತ್ತಿದ್ದಾರೆ, ಒಳ್ಳೆಯ dramatic ಕೇಳುವುದಕ್ಕೆ ಏನು ಚೆನ್ನಾಗಿದೆ, ತಾವು ಮಾತನಾಡಬೇಕಾಗಿದೆ, ಆದುದರಿಂದ ದಯವಿಟ್ಟು ಬೇಗ ಮುಗಿಸಿ.

SRI S. RAJENDRAN: I can' stop it and I will speak tomorrow. You can speak. No problem. ಇಂಡಸ್ಟ್ರಿ ಬಗ್ಗೆ ಹೇಳಿದ್ದಾರೆ, It is right time. My Industries Minister has also come. Whenever I speak about the industries for KGF, my Minister used to say, 'You are like my brother.' He has said number of times, Sir, I said whenever I speak, whenever I approach it him he says that you are like my brother. Definitely, I will do it.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕೆ ಸಚಿವರು): ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಒಂದು ಒಳ್ಳೆಯ ವಿಚಾರವನ್ನು ಈ ಸಂದರ್ಭದಲ್ಲಿ ಕೆ.ಜಿ.ಎಫ್. ಜನತೆಗೆ ಅಲ್ಲಿರುವ ಬಿಜಿಎಂಎಲ್ ಬಹಳ ದಿವಸಗಳಿಂದ ತೊಂದರೆಯಲ್ಲಿ ಇದ್ದುದರಿಂದ ಅಲ್ಲಿ ಪುನಃ ಕೈಗಾರಿಕಾ ಪ್ರದೇಶವನ್ನಾಗಿ ಪುನಃಶ್ಚೇತನಗೊಳಿಸಬೇಕೆಂದು ಬಹಳ ದಿವಸಗಳಿಂದ ಅವರು ಹೇಳುತ್ತಿದ್ದರು. ಒಂದು ಸ್ಪಾಂಜ್ ಐರನ್ ಫ್ಲಾಂಟ್‌ಗೆ ಅಲ್ಲಿಯ ನಮ್ಮ ಸಿಂಗಲ್ ವಿಂಡೋ ಏಜೆನ್ಸಿನಲ್ಲಿ ಸುಮಾರು 200 ಕೋಟಿ ರೂಪಾಯಿ ವೆಚ್ಚದಲ್ಲಿ ಖರ್ಚು ಮಾಡಲಿಕ್ಕೆ ಒಂದು ಪ್ರಾಜೆಕ್ಟ್‌ನ್ನು ಕ್ಲಿಯೆರೆನ್ಸ್ ಮಾಡಿದ್ದೇನೆ, ಈ ವರ್ಷದಲ್ಲಿ ಆ ಕೆಲಸ ಪ್ರಾರಂಭವಾಗುತ್ತದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದಲ್ಲದೇ ಅಪೇರಲ್ ಇಂಡಸ್ಟ್ರೀಗೆ ಒಂದು ಅಪೇರಲ್ ಪಾರ್ಕ್ ಅನ್ನೂ ಸಹ ಕೆಜಿಎಫ್‌ನಲ್ಲಿ ಮಾಡಬೇಕು ಎನ್ನುವ ಉದ್ದೇಶ ಇಟ್ಟುಕೊಂಡು ಕೇಂದ್ರ ಸರ್ಕಾರಕ್ಕೆ ಅದರ ಪ್ರಸ್ತಾವನೆಯನ್ನು ಕಳುಹಿಸಿದ್ದೇನೆ, ಮಾನ್ಯ ಸದಸ್ಯರು ಕೇಂದ್ರ ಸರ್ಕಾರದ ಜೊತೆಯಲ್ಲಿ ಅವರೂ ಸಹಿತ ಸ್ವಲ್ಪ ಒತ್ತಡವನ್ನು ತಂದು ಆ ಅಪೇರಲ್ ಪಾರ್ಕ್‌ನ್ನು ಮಂಜೂರಾತಿ ಮಾಡಿದರೆ ಎರಡು–ಮೂರು ಇಂಡಸ್ಟ್ರಿಗಳು ಪ್ರಾರಂಭವಾದರೆ, ಮತ್ತೆ ಕೆಜಿಎಫ್‌ಗೆ ಕೈಗಾರಿಕಾ ಕ್ಷೇತ್ರದಲ್ಲಿ ಮತ್ತೆ ಜೀವ ಬಂದ ಹಾಗೆ ಆಗುತ್ತದೆ ಎಂದು ತಿಳಿಸಲಿಕ್ಕೆ ಬಯಸುತ್ತೇನೆ.

SRI S. RAJENDRAN: That is what I wanted to bring it your notice, Sir. I said ಯಾವಾಗಲೂ ಇಂಡಸ್ಟ್ರಿ ಬಗ್ಗೆ ಕೇಳಿದ್ದೆ, ನಮ್ಮ ಮಂತ್ರಿಯವರು 'You are like my brother.' ನಾವು ಕೊಡುತ್ತೇವೆಂದು ಹೇಳುತ್ತಿದ್ದರೂ ಈಗ ಪತ್ರಿಕೆಗಳಲ್ಲಿ ನೋಡಿದರೆ ಈ ತರಹ ಇಂಡ್‌ಸ್ಟ್ರಿ ಕೊಡುತ್ತೇವೆಂದು ತಾವು ಹೇಳಿದ್ದೀರಿ, it is ok.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಇಡೀ ದೇಶದಲ್ಲಿ ಎಲ್ಲಾ ಪಟ್ಟಣಗಳು ದಿನೇ ದಿನೇ ಬೆಳೆಯುತ್ತಿವೆ, ಅದರೆ ಕೆಜಿಎಫ್‌ನಲ್ಲಿ ಜನಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ. ಮಾನ್ಯ ರಾಜೇಂದ್ರನ್ ಹೇಳುವುದು ಅಕ್ಷರ ಸಹ ನಿಜ. ಅಲ್ಲಿ ಒಂದು ಕಾಲದಲ್ಲಿ ಅಲ್ಲಿಗೆ ಹೋಗಬೇಕಾದರೆ ಅಷ್ಟೊಂದು ದೊಡ್ಡ ರೀತಿಯಲ್ಲಿ ಬೆಳೆದಂಥ ಪಟ್ಟಣ. ಇವತ್ತು ಬಿಜಿಎಂಎಲ್ ಹೋದ ಮೇಲೆ ಬಹಳಷ್ಟು ಜನ ಸಂಕಷ್ಟದಲ್ಲಿ ಇದ್ದಾರೆ. ಅದಕ್ಕೆ ಮಾನ್ಯ ಸಿಂಧ್ಯಾರವರು ಈಗಾಗಲೇ ಆ ತೀರ್ಮಾನ ತೆಗೆದುಕೊಂಡಿರುವುದು ಸರ್ಕಾರದ ಪರವಾಗಿ ನಾನು ಅವರಿಗೆ ವೈಯುಕ್ತಿಕ ಹಾಗೂ ಜಿಲ್ಲೆಯ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಾ ಇದನ್ನು ಏನಾದರೂ ಇಂಡಸ್ಟ್ರಿಯಲ್

ಗ್ರೋಥ್ ಸೆಂಟರ್ ಮಾಡಬೇಕೆಂದು ಮಾನ್ಯ ರಾಜೇಂದ್ರನ್ ಪರವಾಗಿ ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಕೆಜಿಎಫ್‌ನಲ್ಲಿ ಸಾಕಷ್ಟು ಜಮೀನು ಇರುವುದರಿಂದ ಅದನ್ನು ಕೈಗಾರಿಕಾ ಬೆಳವಣಿಗೆ ಮಾಡಲಿಕ್ಕೆ unless the investors come, ಇಂಡಸ್ಟ್ರೀಯಲ್ ಗ್ರೋಥ್ ಮಾಡುವುದರಲ್ಲಿ ಏನೂ ಅರ್ಥವಿಲ್ಲ. ಆದರೆ ಅದನ್ನು ಇಂಡಸ್ಟ್ರಿ ಬರಲಿಕ್ಕೆ ಏನೇನು ಅವಕಾಶ ಬೇಕು, 4–5 ಸಾವಿರ ಜನಕ್ಕೆ ಕೆಲಸ ಸಿಗುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದು ಅಷ್ಟೇ ಅಲ್ಲ, ಸದನಕ್ಕೆ ಮತ್ತು ಈ ರಾಜ್ಯದ ಜನತೆಗೆ ಈ ಸಂದರ್ಭದಲ್ಲಿ ಮತ್ತೊಂದು ವಿಚಾರವನ್ನು ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಮ್ಮಲ್ಲಿ 5–6 ಪಟ್ಟಣಗಳು ಇದೇ ರೀತಿಯಲ್ಲಿ ಇಂಡಸ್ಟ್ರೀ ವೈಸ್ ಸಾಯುತ್ತಿವೆ. ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ದಾಂಡೇಲಿ, ತುಮಕೂರು, ಹರಿಹರ, ಕೆಜಿಎಫ್, ದಾವಣಗೆರೆ ಈ ಐದು ಪಟ್ಟಣಗಳಲ್ಲಿ ಇರುವ ಇಂಡಸ್ಟ್ರಿಸ್‌ಗಳನ್ನು ರಿವೈವ್ ಮಾಡಲಿಕ್ಕೆ, ಹೊಸದಾಗಿ ಯಾವ ಇಂಡಸ್ಟ್ರಿಸ್‌ಗಳನ್ನು ಸೃಷ್ಟಿ ಮಾಡಬೇಕು, ಮತ್ತು ನಮ್ಮಲ್ಲಿರುವ ವರ್ಕರ್ಸ್‌ಗೆ ಬೇರೆ ಟ್ರೈನಿಂಗ್ ಕೊಟ್ಟು ಏನು ಇಂಡಸ್ಟ್ರೀಸ್ ಮಾಡಬಹುದು ಎನ್ನುವುದಕ್ಕೆ ನಾನು ಒಂದು ಟಾಸ್ಕ್ ಫೋರ್ಸ್‌ನ್ನು ನಾನು ನೇಮಕ ಮಾಡಿದ್ದೇನೆ, ಸದ್ಯದಲ್ಲೇ ಅದರ ವರದಿ ಬರುತ್ತದೆ, ಆ ವರದಿ ಬಂದ ನಂತರ ಈ ಐದು ಪಟ್ಟಣಗಳಲ್ಲಿ, ಹರಿಹರ, ದಾಂಡೇಲಿ, ತುಮಕೂರು, ದಾವಣಗೆರೆ, ಕೆಜಿಎಫ್ ಇಲ್ಲಿ ಇದನ್ನು ಕಾರ್ಯಗತ ಮಾಡಲಿಕ್ಕೆ ನಾನು ಖಂಡಿತವಾಗಿ ಅದನ್ನು ಅನುಷ್ಠಾನಗೊಳಿಸುತ್ತೇನೆ. ಕೆಜಿಎಫ್‌ನಲ್ಲಿ ನಾನು ಈಗಾಗಲೇ ಕಾರ್ಯವನ್ನು ಪ್ರಾರಂಭ ಮಾಡಿದ್ದೇನೆ.

ಶ್ರೀ ಶಿವಾನಂದ್ ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಕೈಗಾರಿಕೆ ಸಚಿವರಲ್ಲಿ ನನ್ನದೊಂದು ವಿನಂತಿ ಇದೆ. ಅದೇನೆಂದರೆ, ಬಿಜಾಪುರ ಮತ್ತು ಬಾಗಲಕೋಟೆಯಲ್ಲಿ ಇರತಕ್ಕಂಥ ಸ್ಪಿನಿಂಗ್ ಮಿಲ್‌ಗಳು ಮುಚ್ಚಿರುವುದರಿಂದ ಅಲ್ಲಿರತಕ್ಕಂಥ ಜನರು ಮೈಗ್ರೇಟ್ ಆಗಿ ಹೋಗುತ್ತಿರುವುದು ಮಾನ್ಯ ಸಚಿವರ ಗಮನದಲ್ಲಿದೆ. ಆದ್ದರಿಂದ, ತಾವು ಈಗಾಗಲೇ ಹೇಳಿರುವ 5 ಜಿಲ್ಲೆಗಳ ಜೊತೆಗೆ ಬಿಜಾಪುರ ಮತ್ತು ಬಾಗಲಕೋಟೆಯಲ್ಲಿ ಕೊನೇಪಕ್ಷ ಫುಡ್ ಪ್ರೋಸೆಸಿಂಗ್ ಪಾರ್ಕನ್ನು ಮಾಡಬೇಕು. ಈಗಾಗಲೇ ಬಾಗಲಕೋಟೆಗೆ ಫುಡ್ ಪ್ರೋಸೆಸಿಂಗ್ ಪಾರ್ಕ್ ಕೊಟ್ಟಿದ್ದೀರಿ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಬಿಜಾಪುರದಲ್ಲಿ ಕೊನೇ ಪಕ್ಷ ಒಂದು ಫುಡ್ ಪ್ರೋಸೆಸಿಂಗ್ ಪಾರ್ಕನ್ನು ಪ್ರಾರಂಭ ಮಾಡತಕ್ಕಂಥ ವಿಚಾರ ಮಾಡುತ್ತೀರಾ ಎಂಬ ವಿಷಯವನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕೈಗಾರಿಕೆ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಸದಸ್ಯರುಗಳ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಇಚ್ಛೆಪಡುತ್ತೇನೆ. ಸಮ್ಮಿಶ್ರ ಸರ್ಕಾರವು ಇಡೀ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಮತ್ತು ವಿಶೇಷವಾಗಿ ಡಾ: ನಂಜುಂಡಪ್ಪ ವರದಿಯನ್ನು ಜಾರಿಗೆ ತರುವುದಕ್ಕೆ ಕೈಗಾರಿಕೆ ಇಲಾಖೆ ಕ್ರಮವನ್ನು ತೆಗೆದುಕೊಂಡಿದೆ. ಡಾ: ನಂಜುಂಡಪ್ಪ ವರದಿಯ ಪ್ರಕಾರ ರಾಜ್ಯದಲ್ಲಿರತಕ್ಕಂಥ ಸುಮಾರು 37 ಹಿಂದುಳಿದ ತಾಲ್ಲೂಕುಗಳು ಮತ್ತು ಅತೀ ಹಿಂದುಳಿದಿರತಕ್ಕಂಥ 40 ತಾಲ್ಲೂಕುಗಳು ಅಂದರೆ, ಒಟ್ಟು 77 ತಾಲ್ಲೂಕುಗಳಲ್ಲಿ ಡಾ: ನಂಜುಂಡಪ್ಪ ವರದಿಯನ್ನು ಜಾರಿಗೊಳಿಸುವುದಕ್ಕೆ ಕೈಗಾರಿಕೆ ಇಲಾಖೆಯಿಂದ ಈಗಾಗಲೇ ಆಕ್ಷ್ಯನ್ ಪ್ಲಾನ್ ಒಂದನ್ನು

ತಯಾರು ಮಾಡಿದ್ದೇವೆ. ನಾನು ಮಾನ್ಯ ಉಪ ಮುಖ್ಯಮಂತ್ರಿಯವರು ಯೋಜನಾ ಆಯೋಗ ಮುಂದೆ ಹೋಗಿ ನಮ್ಮ ರಾಜ್ಯದ ಯೋಜನೆಯ ಬಗ್ಗೆ ಅಲ್ಲಿ ಮಾಹಿತಿ ಕೊಟ್ಟಂಥ ಸಂದರ್ಭದಲ್ಲಿ ಮೂರು ವರ್ಷಗಳಲ್ಲಿ ಸುಮಾರು 1,250 ಕೋಟಿ ರೂಪಾಯಿ ಹಿಂದುಳಿದ ಮತ್ತು ಅತೀ ಹಿಂದುಳಿದಿರತಕ್ಕಂಥ ಎಲ್ಲಾ ತಾಲ್ಲೂಕುಗಳಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದ ಬೀದರ್, ಗುಲ್ಬರ್ಗ ಮತ್ತು ಇತರೇ ಬಹುತೇಕ ತಾಲ್ಲೂಕುಗಳು ಇದರಲ್ಲಿ ಸೇರಿವೆ. ಮತ್ತೆ ಇತ್ತ ಕಡೆ ಚಾಮರಾಜನಗರ ಜಿಲ್ಲೆಯಲ್ಲಿ ಅನೇಕ ತಾಲ್ಲೂಕುಗಳು ಸೇರಿವೆ. ಒಟ್ಟಾರೆ ಹಿಂದುಳಿದಿರತಕ್ಕಂಥ ಎಲ್ಲಾ ತಾಲ್ಲೂಕುಗಳಲ್ಲಿ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಒಂದು ವಿಶೇಷವಾದ ಯೋಜನೆಯನ್ನು ತಯಾರು ಮಾಡಿದ್ದೇವೆ. ಮಾನ್ಯ ಉಪ ಮುಖ್ಯಮಂತ್ರಿಯವರು ಈ ವರ್ಷದ ಆಯವ್ಯಯವನ್ನು ಮಂಡನೆ ಮಾಡತಕ್ಕಂಥ ಸಂದರ್ಭದಲ್ಲಿ ಇದಕ್ಕೆ ಸ್ವಲ್ಪ ಹಣವನ್ನು ಕೊಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೇನೆ. ಮತ್ತೆ ಇದರ ಕಾರ್ಯಗತವನ್ನು ಈ ವರ್ಷದಲ್ಲಿಯೇ ಪ್ರಾರಂಭ ಮಾಡುತ್ತೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಮಾನ್ಯ ಶಿವಾನಂದ ಪಾಟೀಲ್‌ರವರು ಒಂದು ಉತ್ತಮವಾದಂಥ ಸಲಹೆಯನ್ನು ಕೊಟ್ಟಿದ್ದಾರೆ. ಇಷ್ಟು ಹೊತ್ತಿಗಾಗಲೇ ಬಿಜಾಪರುದಲ್ಲಿ ಫುಡ್ ಪಾರ್ಕ್ ಮತ್ತು ಏರ್ ಪೋರ್ಟ್ ಆಗಬೇಕಾಗಿತ್ತು. ಇವೆರಡೂ ಆಗದಿದ್ದರೆ ಬಿಜಾಪುರದಲ್ಲಿ ಅತ್ಯಂತ ಕಡಿಮೆ ಮಳೆ ಮತ್ತು ಕಡಿಮೆ ನೀರಿನಲ್ಲಿ ಹೆಚ್ಚಿನ ಬೆಳೆಯನ್ನು ಮತ್ತು ಅತ್ಯಂತ ಉತ್ಕೃಷ್ಟವಾದ ಹಣ್ಣುಗಳನ್ನು ಉತ್ಪಾದನೆ ಮಾಡುವ ಅವಕಾಶ ಅಲ್ಲಿನ ರೈತರಿಗೆ ಇತ್ತು. ಇದರ ಬಗ್ಗೆ ನಾನು ಮತ್ತು ತೋಟಗಾರಿಕೆ ಇಲಾಖೆಯ ಮಂತ್ರಿ ಆಗಿರತಕ್ಕಂಥ ಮಾನ್ಯ ಶ್ರೀನಿವಾಸ್‌ರವರು ಚರ್ಚೆ ಮಾಡಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಫುಡ್ ಪಾರ್ಕ್‌ಗಳನ್ನು ಮಾಡುವುದಕ್ಕೆ ಎಲ್ಲೆಲ್ಲಿ ಸಾಧ್ಯವಿದೆ, ಅಲ್ಲೆಲ್ಲಾ ಫುಡ್ ಪಾರ್ಕ್ ಮಾಡುವುದಕ್ಕೆ ಸಾಧ್ಯ ಮಾಡಬೇಕೆಂದು ಮತ್ತು ಈಗಾಗಲೇ ಕೆಲವು ಕಡೆ ಮ್ಯಾಂಗೋ ಮತ್ತು ಕೆಲವು ಕಡೆ ಪಪಾಯಿ, ಕೆಲವು ಕಡೆ ಅನಾನಸ್ ಮತ್ತೆ ಕೆಲವು ಕಡೆ ದ್ರಾಕ್ಷಿ ಬೆಳೆಯುತ್ತಾರೆ. ಈಗ ಸಕಲೇಶಪುರದಲ್ಲಿ ಒಂದು ಫುಡ್ ಪಾರ್ಕ್ ಮಾಡಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದೇವೆ. ಏಕೆ ಇದನ್ನು ಅಲ್ಲಿ ಮಾಡುತ್ತಿದ್ದೇವೆಂದರೆ, ಸಕಲೇಶಪುರ, ಹಾಸನ ಮತ್ತು ಈ ಕಡೆ ಕೊಡಗು ಪ್ರದೇಶಗಳಲ್ಲಿ ಅನಾನಸ್‌ನ್ನು ಬಹಳ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಾರೆ. ಇದನ್ನು ಎಕ್ಸ್‌ಪೋರ್ಟ್ ಜೋನ್ ಮಾಡಿಕೊಡುವುದಕ್ಕೋಸ್ಕರ ವಿಶೇಷವಾಗಿ ಇನ್‌ಫ್ರಾಸ್ಟ್ರಕ್ಚರ್‌ನ್ನು ಡೆವಲಪ್ ಮಾಡಿಕೊಟ್ಟರೆ ಇದನ್ನು ಮಾಡುವುದಕ್ಕೆ ಅನುಕೂಲವಾಗುತ್ತೆ. On the similar front, I promise you this year itself. ಈ ಕಡೆ ಇರತಕ್ಕಂಥ ಸದಸ್ಯರಿಗೆ ನಾನು ಈಗಾಗಲೇ ಭರವಸೆ ಕೊಟ್ಟಿದ್ದೇನೆ. ಆ ದಿವಸ ಮಾನ್ಯ ಸದಸ್ಯರು ಇರಲಿಲ್ಲ. ಈ ಅಧಿವೇಶನ ಮುಗಿದ ಮೇಲೆ ನಾನು ಬಿಜಾಪುರ ಜಿಲ್ಲೆಗೆ ಬರುತ್ತಿದ್ದೇನೆ. ಬಿಜಾಪುರದಲ್ಲಿ ಒಂದು ಒಳ್ಳೆಯ ವಿಮಾನ ನಿಲ್ದಾಣವನ್ನು ಮಾಡೋಣ. ಇದರಿಂದ ರಫ್ತುಗೆ ಅನುಕೂಲವಾಗುತ್ತದೆ. ಮತ್ತು ಫುಡ್ ಪಾರ್ಕ್‌ನ್ನು ಖಂಡಿತವಾಗಿ ಮಾಡಬೇಕಾಗಿದ್ದು, ಇದಕ್ಕೆ ಸಂಬಂಧಪಟ್ಟಂತೆ ನಮ್ಮ ಸರ್ಕಾರದಿಂದ ಭಾರತ ಸರ್ಕಾರಕ್ಕೆ ರೆಕಮೆಂಡ್ ಮಾಡುತ್ತೇವೆ. ತಾವೂ ಕೂಡ ಇದಕ್ಕೆ ಒತ್ತಡ ಹಾಕಿ ಇದನ್ನು ಮಂಜೂರಾತಿ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಎ. ಪಾಪರೆಡ್ಡಿ: ಮಾನ್ಯ ಅಧ್ಯಕ್ಷರೆ, ನಮ್ಮ ರಾಯಚೂರು ಜಿಲ್ಲೆಯಲ್ಲಿ ಸುಮಾರು ಸಾವಿರ ಎಕರೆ ಜಮೀನು ತೆಗೆದುಕೊಂಡು 10 ವರ್ಷಗಳಾಗಿವೆ. ಮತ್ತೆ ಅಲ್ಲಿ ಈಗಾಗಲೇ ಭೌತಿಕವಾಗಿ

ಎಲ್ಲಾ ಅಭಿವೃದ್ಧಿ ಕೆಲಸಗಳಾಗಿವೆ. ಆದರೆ, ಇದುವರೆಗೆ ಅಲ್ಲಿ ಒಂದು ಇಂಡಸ್ಟ್ರೀ ಬಂದಿಲ್ಲ. ಆ ಒಂದು ಕಾರಣದಿಂದ ಮಾನ್ಯ ಸಿಂಧ್ಯರವರು ಇಂಥ ಒಂದು ಯೋಜನೆಯನ್ನು ತಂದು ಅಲ್ಲಿ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಬೇಕು.

ಅಧ್ಯಕ್ಷರು: ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣೆಯ ಮೇಲೆ ಮಾತನಾಡುವುದಕ್ಕೆ ತಮಗೆ ಅವಕಾಶ ಕೊಡುತ್ತೇನೆ. ಆ ಸಂದರ್ಭದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿ. ಆದ್ದರಿಂದ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎ. ಪಾಪರೆಡ್ಡಿ: ನಮ್ಮ ರಾಯಚೂರು ಜಿಲ್ಲೆ ಅತ್ಯಂತ ಹಿಂದುಳಿದ ಪ್ರದೇಶ ಆಗಿದ್ದು, ನಮಗೂ ಕೂಡ ಕೈಗಾರಿಕೆ ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಮಾನ್ಯ ಸಿಂಧ್ಯರವರಲ್ಲಿ ಕೇಳುತ್ತಿದ್ದೇನೆ. ಮಾನ್ಯ ಸಚಿವರು ಇದರ ಬಗ್ಗೆ ಉತ್ತರ ಕೊಡಬೇಕು.

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರಾಜೇಂದ್ರನ್‌ರವರೇ, ತಾವು ಬೇಗ ಮಾತನಾಡಿ ಮುಗಿಸಿ.

ಶ್ರೀ ಎಸ್. ರಾಜೇಂದ್ರನ್: ನಿಮಗೆಲ್ಲಾ ಸಹಾಯ ಮಾಡುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದ್ದರಿಂದ ದಯವಿಟ್ಟು ಕುಳಿತುಕೊಳ್ಳಿ. ನಾಳೆ ದಿವಸ ನಿಮಗೂ ಕೂಡ ಮಾತನಾಡುವುದಕ್ಕೆ ಅವಕಾಶ ಸಿಗುತ್ತದೆ. ಆ ಸಂದರ್ಭದಲ್ಲಿ ತಾವು ಮಾತನಾಡಬಹುದು. What he has given for the KGF, I am thankful to the Industries Minister you said thousand crores investment and 26 companies ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದೀರಿ. ಮತ್ತೆ ಲೇಬರ್ ಓರಿಯೆಂಟೆಲ್ ಮಾಡಿ ಕೊಡಲಾಗುತ್ತದೆಂದು ತಾವು ಹೇಳಿದ್ದೀರಿ. will be thankful to you for ever sir, ಇದರ ಮೇಲೆ ನಾವು ಹೆಚ್ಚು ಫೋರ್ಸ್ ಮಾಡುವುದಿಲ್ಲ. ನೀವು ಇಷ್ಟು ಮಾಡಿರುವುದಕ್ಕೆ ನಾವು ಸಂತೋಷದಿಂದ ಇರುತ್ತೇವೆ. ಮಾಲೂರುನಲ್ಲಿ ಒಂದು ಫುಡ್ ಪಾರ್ಕ್ ಮಾಡುತ್ತೇವೆಂದು ಈ ಪುಸ್ತಕದಲ್ಲಿ ಕೊಟ್ಟಿದ್ದೀರಿ. ಇದಕ್ಕೆ ಬಹಳ ಸಂತೋಷ. What is the distance between Malur and KGF? Not even half an hour journey. ಈಗ ತೋಟಗಾರಿಕೆ ಇಲಾಖೆಯ ಸಚಿವರು ನಮ್ಮ ಜಿಲ್ಲೆಯವರೇ ಆಗಿದ್ದಾರೆ. ಆದ್ದರಿಂದ ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, you must take more interest about KGF.

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಕೆ.ಜಿ.ಎಫ್‌ನಲ್ಲಿ ಕೈಗಾರಿಕೆಗಳನ್ನು ತರುವುದರ ಬಗ್ಗೆ ಈಗಾಗಲೇ ಮಾನ್ಯ ಕೈಗಾರಿಕೆ ಇಲಾಖೆಯ ಸಚಿವರು ಇಲ್ಲಿ ಹೇಳಿದ್ದಾರೆ. ಇದನ್ನು ನಾನೂ ಕೂಡ ಸ್ವಾಗತ ಮಾಡುತ್ತೇನೆ. ಇದಲ್ಲದೆ, ನಮ್ಮ ತೋಟಗಾರಿಕೆ ಇಲಾಖೆಯಿಂದ ಅಲ್ಲಿ ಸುಮಾರು ನಾಲ್ಕು ಸಾವಿರ ಎಕರೆ ಪ್ರದೇಶದಲ್ಲಿ...

ಶ್ರೀ ಎಸ್. ರಾಜೇಂದ್ರನ್: 12 ಸಾವಿರ ಎಕರೆ ಪ್ರದೇಶ ಕೆ.ಜಿ.ಎಫ್.ನಲ್ಲಿ ಲಭ್ಯವಿದೆ.

ಶ್ರೀ ಆರ್. ಶ್ರೀನಿವಾಸ್: ಅಲ್ಲಿ ಸುಮಾರು ನಾಲ್ಕು ಸಾವಿರ ಎಕರೆ ಭೂಮಿ ಇದ್ದು ಎತ್ತೇಚ್ಛವಾದಷ್ಟು ನೀರೂ ಕೂಡ ಅಲ್ಲಿದೆ. ಸುಮಾರು ಮೂರು ಸಾವಿರ ಕೆಳಗಡೆ ಇರತಕ್ಕಂಥ

ಮೈನ್ಸ್‌ನಲ್ಲಿರುವ ನೀರನ್ನು ಸರಿಯಾಗಿ ಬಳಕೆ ಮಾಡಿಕೊಂಡರೆ ಇಡೀ ಕೋಲಾರ ಜಿಲ್ಲೆಗೆ ಉಪಯೋಗ ಮಾಡತಕ್ಕಂಥ ಅವಶ್ಯಕತೆ ಇದೆ. ಈ ಒಂದು ಸಂದರ್ಭದಲ್ಲಿ ನಾವು ಅಲ್ಲಿ ಸುಮಾರು ಎರಡು ಸಾವಿರ ಎಕರೆ ಪ್ರದೇಶವನ್ನು ತೆಗೆದುಕೊಂಡು ಈ ಜಮೀನಿನಲ್ಲಿ ಇಸ್ರೇಲ್ ಟೈಪ್‌ನಲ್ಲಿ ಕಲ್ಟಿವೇಶನ್ ಮಾಡುವುದಲ್ಲದೆ ಅಲ್ಲಿ ಒಂದು ಫುಡ್ ಪಾರ್ಕ್ ಮಾಡಿ, ಬಿಜಿಎಂಎಲ್ ಕಾರ್ಮಿಕರು ಸುಮಾರು ಮೂರು ವರ್ಷಗಳಿಂದ ಬಹಳ ಕಷ್ಟದಲ್ಲಿದ್ದು ಮತ್ತೆ ಅವರಿಗೆ ವಿಆರ್‌ಎಸ್ ಕೂಡ ಸಿಕ್ಕಿಲ್ಲದೆ ಬಹಳ ತೊಂದರೆ ಅನುಭವಿಸುತ್ತಿರುವುದರಿಂದ ನಾವು ಈಗಾಗಲೇ ತೆಗೆದುಕೊಂಡಿರತಕ್ಕಂಥ ಜಮೀನಿನಲ್ಲಿ ಪ್ರತಿಯೊಬ್ಬ ಕಾರ್ಮಿಕನಿಗೆ ಸುಮಾರು ಎರಡು ಎಕರೆ ಪ್ರದೇಶ ಕೊಟ್ಟು ಅಲ್ಲಿ ತೋಟಗಾರಿಕೆ ಐಟಂಗಳನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈಗಾಗಲೇ ಇದಕ್ಕೆ ಸಂಬಂಧಪಟ್ಟಂಥ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ಈಗ ನಮ್ಮ ಸರ್ಕಾರ ಅಲ್ಲಿ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುತ್ತಿದ್ದು, ಇದರ ಜೊತೆಗೆ ಅಲ್ಲಿ ತೋಟಗಾರಿಕೆ ಇಲಾಖೆಯ ಮುಖಾಂತರ ಇದನ್ನು ಅಭಿವೃದ್ಧಿಪಡಿಸಲಾಗುತ್ತದೆಂದು ಈ ಸಂದರ್ಭದಲ್ಲಿ ಆಶ್ವಾಸನೆ ಕೊಡುತ್ತಿದ್ದೇನೆ. ಇದರಿಂದ ಸುಮಾರು ಎರಡು ಸಾವಿರ ಕುಟುಂಬಗಳಿಗೆ ಅನುಕೂಲ ಮಾಡಿಕೊಡಬಹುದು ಮತ್ತೆ ಅವರ ಆರ್ಥಿಕ ಪರಿಸ್ಥಿತಿ ಕೂಡ ಚೆನ್ನಾಗಿ ಆಗುತ್ತದೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಪ್ರಕಾರ ಮಾಲೂರಿನಲ್ಲಿ ಫುಡ್ ಪಾರ್ಕ್ ಪ್ರಾರಂಭ ಮಾಡುತ್ತಿರುವುದರಿಂದ ಕೆಜಿಎಫ್ ಅಲ್ಲಿಂದ ಕೇವಲ 25 ಕಿ.ಮೀ. ಇದ್ದು, ಇಲ್ಲಿ ಬೆಳೆಯತಕ್ಕಂಥ ಹಣ್ಣು ಮತ್ತು ತರಕಾರಿಗಳಿಗೆ ಸೂಕ್ತವಾದ ಬೆಲೆ ಬರುವುದಕ್ಕೆ ಈ ಒಂದು ವ್ಯವಸ್ಥೆಯನ್ನು ಮಾಡುತ್ತಿದ್ದೇನೆಂದು ತಮ್ಮ ಮುಖಾಂತರ ಅವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಕೃಷಿ ಮಂತ್ರಿಯವರಿಗೆ ನಾನು ಹೇಳುವುದೇನೆಂದರೆ, ಈಗಾಗಲೇ ಮಾನ್ಯ ತೋಟಗಾರಿಕೆ ಸಚಿವರು ಕೆ.ಜಿ.ಎಫ್.ನಲ್ಲಿ ತೋಟಗಾರಿಕೆ ಇಲಾಖೆಯಿಂದ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಇದಕ್ಕೆ ನಮಗೆ ಸಂತೋಷವಾಗಿದೆ. ಇದರ ಜೊತೆಗೆ ತಮ್ಮ ಕೃಷಿ ಇಲಾಖೆ ವತಿಯಿಂದ ಕೆ.ಜಿ.ಎಫ್.ಗೆ ಎಷ್ಟರ ಮಟ್ಟಿಗೆ ಅನುಕೂಲ ಮಾಡಿಕೊಡಬೇಕೆಂದು ತಮಗೆ ಗೊತ್ತಿದೆ. ಶ್ರೀಮಾನ್ ಬೈರೇಗೌಡರು ಇದ್ದಂಥ ಕಾಲದಲ್ಲಿ ತಾವೂ ಕೂಡ ಅವರ ಜೊತೆಯಲ್ಲಿದ್ದವರು. ಅವರ ಕಾಲದಲ್ಲಿ ಕೆ.ಜಿ.ಎಫ್.ಗೆ ಎಷ್ಟರ ಮಟ್ಟಿಗೆ ಅನುಕೂಲವಾಗಿದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಗ ಬಸ್ ಸ್ಟ್ಯಾಂಡ್, ಫೈರ್ ಫೋರ್ಸ್ ಸ್ಟೇಷನ್ ಮತ್ತು ಎಸ್‌ಸಿ:ಎಸ್‌ಟಿ ಹಾಸ್ಟೆಲ್ಸ್ ಪ್ರಾರಂಭವಾಗಿವೆ. ಈ ಸಂದರ್ಭದಲ್ಲಿ ಮಾನ್ಯ ಶ್ರೀನಿವಾಸಗೌಡರು ನಮ್ಮ ಜೊತೆಯಲ್ಲಿಯೇ ಇದ್ದರು. ಈಗಲೂ ಕೂಡ ನಮ್ಮ ಜೊತೆಯಲ್ಲಿದ್ದಾರೆ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ತಾವು ಸ್ವಲ್ಪ ಜೋರಾಗಿ ಮಾತನಾಡಿ ಕುಡಿಯುವ ನೀರಿಗೆ ಒಂದು ವ್ಯವಸ್ಥೆ ಮಾಡಿಕೊಟ್ಟರೆ ಬಹಳ ಚೆನ್ನಾಗಿರುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಈಗ ಪಿ.ಯು.ಸಿ. ಫೇಲ್ ಆಗಿರತಕ್ಕಂಥ ವಿದ್ಯಾರ್ಥಿಗಳಿಗೆ supplementary examinations will be held in the month of June-July itself from 2005 ಮಾಡುತ್ತಿರುವುದು ಸ್ವಾಗತಾರ್ಹ. ಫೇಲ್ ಆಗಿರತಕ್ಕಂಥ ವಿದ್ಯಾರ್ಥಿಗಳಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ರೀತಿಯಲ್ಲಿ ಮತ್ತೆ ಪರೀಕ್ಷೆ ಮಾಡಿ ಅವರು ತಕ್ಷಣ ಪರೀಕ್ಷೆ ತೆಗೆದುಕೊಂಡು ಬೇಗ ಮತ್ತೆ ಪಾಸ್ ಆಗುವುದಕ್ಕೆ ಅವಕಾಶ ಕೊಟ್ಟಿರತಕ್ಕಂಥದಕ್ಕೆ ನಿಜವಾಗಿಯೂ ಕೂಡ I am proud of this Government for taking so much care about students. ಏತಕೆಂದರೆ, ಈ

ವಿದ್ಯಾರ್ಥಿಗಳ ಮೂಡ್ಸ್ ಫೇಲ್ ಆಗಬಾರದೆಂದು ಮತ್ತು ಆತ ಫೇಲ್ ಆಗಿದ್ದೇನೆಂದು ಆತ ಸ್ಟಡಿ ಡಿಸ್‌ಕಂಟಿನ್ಯೂ ಆಗಬಾರದೆಂಬ ದೃಷ್ಟಿಯಿಂದ ಇದನ್ನು ಮಾಡಿದ್ದೀರಿ. ಫೇಲ್ ಆದರೆ ಡಿಗ್ರಿ ಮಾಡುವುದಕ್ಕೆ ಆಗುವುದಿಲ್ಲ. ಪಾಸ್ ಆಗಿ ಕೆಲಸ ಸಿಗದಿದ್ದರೆ ಕೂಡ ಪರವಾಗಿಲ್ಲ. ನಾನೊಬ್ಬ ಡಿಗ್ರಿ ಸ್ಟೂಡೆಂಟ್ ಎಂದು ತಿಳಿದುಕೊಳ್ಳುತ್ತಾನೆ. ಇದು ಆತನಿಗೆ ಗೌರವ ಕೂಡ ಇರುತ್ತದೆ.

ಅಧ್ಯಕ್ಷರು: ಮಾನ್ಯ ರಾಜೇಂದ್ರನ್‌ರವರೆ, ತಾವು ಬೇಗ ಮುಗಿಸಬೇಕು.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ 6-00 ಗಂಟೆಯೊಳಗೆ ಮುಗಿಸುತ್ತೇನೆ.

ಅಧ್ಯಕ್ಷರು: ಬಹಳ ಹೊತ್ತಾಗುತ್ತದೆ.

ಶ್ರೀ ಎಸ್. ರಾಜೇಂದ್ರನ್: ಇಂದಿನ ಸಭೆಯನ್ನು 6-00 ಗಂಟೆಯೊಳಗೆ ಮುಗಿಸೋಣ. ಎಂದು ತಾವೇ ಹೇಳಿದ್ದೀರಿ. ಆದ್ದರಿಂದ, ಈ ಅವಧಿಯೊಳಗೆ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾತನಾಡತಕ್ಕಂಥವರು ಇನ್ನೂ ಬಹಳ ಮಂದಿ ಇದ್ದಾರೆ. ಎಲ್ಲಾ ಅವಕಾಶವನ್ನು ನೀವೊಬ್ಬರೇ ತೆಗೆದುಕೊಂಡರೆ ಅವರಿಗೇನು ಮಾಡುವುದು? ಮಾತನಾಡುವುದನ್ನು ಯಾರೂ ಕೂಡ ನಿಯಂತ್ರಣ ಮಾಡದೆ ಇದ್ದರೆ ಹೇಗೆ?

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ: ಮಾನ್ಯ ಅಧ್ಯಕ್ಷರೆ, ಹೊಸ ಶಾಸಕರು ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು: ಯಾರೂ ಕೂಡ ನಿಯಂತ್ರಣ ಸಾಧಿಸಿಕೊಳ್ಳದಿದ್ದರೆ ಹೇಗೆ? ಸುಮ್ಮನೆ ಎಲ್ಲರೂ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಹೆಚ್.ಎಂ. ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಈ ಸಾರಿ ಸಾಕಷ್ಟು ಜನ ಹೊಸ ಶಾಸಕರು ಬಂದಿದ್ದಾರೆ. ಮತ್ತೆ ಹೊಸಬರಲ್ಲಿ ಮಾತನಾಡತಕ್ಕಂಥ ಸಾಮರ್ಥ್ಯ ಕೂಡ ಇದೆ. ಮತ್ತೆ ನಮ್ಮ ಕ್ಷೇತ್ರಗಳ ಸಮಸ್ಯೆ ಬಗ್ಗೆ ಮಾತನಾಡಬೇಕಾಗಿರುವುದರಿಂದ ತಾವು ದಯಮಾಡಿ ಅವಕಾಶ ಕಲ್ಪಿಸಿಕೊಡಬೇಕು.

ಅಧ್ಯಕ್ಷರು: ಆಯಿತು. ಅವರು ಬೇಗೆ ಮುಗಿಸುತ್ತಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ ಮಾನ್ಯ ರಾಜೇಂದ್ರನ್‌ರವರೆ, ತಾವು ಆದಷ್ಟು ಬೇಗ ತಮ್ಮ ಮಾತನ್ನು ಮುಗಿಸಿ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ನಾನು ಐದು ನಿಮಿಷದಲ್ಲಿ ಮುಗಿಸಬೇಕಾದರೆ ಅವರೆಲ್ಲರೂ ಕುಳಿತುಕೊಳ್ಳಬೇಕು.

ಅಧ್ಯಕ್ಷರು: ಆಯಿತು, ತಾವು ಬೇಗ ಮುಗಿಸಿ. ಬೇರೆಯವರೆಲ್ಲರೂ ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಎಸ್. ರಾಜೇಂದ್ರನ್: ನಾನು ಆರು ಗಂಟೆಯವರೆಗೆ ಮಾತನಾಡಬೇಕಾದರೆ ತಾವು ಕೂಗಾಡಬಹುದು. ಇದರ ಬಗ್ಗೆ ನೀವೇ ತೀರ್ಮಾನ ತೆಗೆದುಕೊಳ್ಳಿ. ಮಾನ್ಯ ಅಧ್ಯಕ್ಷರೆ, ನಾನು ಐದು ನಿಮಿಷದಲ್ಲಿ ಮುಗಿಸುತ್ತೇನೆ. ಆದರೆ, ಇವರು ಮಧ್ಯದಲ್ಲಿ ಮಾತನಾಡುವುದರಿಂದ 10 ನಿಮಿಷ ವೇಸ್ಟ್ ಆಗುತ್ತಿದೆ. ತಾವು ದಯವಿಟ್ಟು ಅವರಿಗೆ ಹೇಳಬೇಕು. I would like to bring to the notice of the Chief Minister and the Deputy Chief Minister that the Government is a coalition Government and you must take care of

the welfare of the Scheduled Castes and Scheduled Tribes people. Whenever we give speech in the election, we talk of uplifting the Scheduled Castes and Scheduled Tribes people. This Government should take a bold decision. ಷೆಡ್ಯೂಲ್ ಕಾಸ್ಟ್ ಜನರ ಹತ್ತಿರ ಹಣ ಇಲ್ಲ, ಕೆಲಸ ಇಲ್ಲ, ಜಮೀನು ಇಲ್ಲ, ಮನೆ ಇಲ್ಲ. ಆಶ್ರಯ ಸ್ಕೀಂನಲ್ಲಿ ಮನೆ ಕೊಡುತ್ತೀರಿ, it just a matter of one room. ಅವುಗಳಿಗೆ ನಿರ್ಮಲನಗರ ಯೋಜನೆಯಲ್ಲಿ ಟಾಯ್ಲೆಟ್ ರೂಂ ಕಟ್ಟಿದ್ದೀರಿ, ಅದು ಎಸಿ ತರಹ: ಇದೆ, ಅಲ್ಲಿ ಮನೆ ಇಲ್ಲ ಸ್ವಾಮಿ, ಟಾಯ್ಲೆಟ್ ಇದೆ. That should be scrutinised. I am always for the Government. ನಿರ್ಮಲನಗರ ಯೋಜನೆಯಲ್ಲಿ ಕಟ್ಟಿರುವ ಟಾಯ್ಲೆಟ್ ರೂಂ ಕಾಸ್ಟ್ ಎಷ್ಟು ಎಂದರೆ 10 ಲಕ್ಷ ರೂಪಾಯಿಗಳೆಂದು ಹೇಳುತ್ತಾರೆ. ಆಶ್ರಯಸ್ಕೀಂನಲ್ಲಿ ಕಟ್ಟಿರುವ ಮನೆಯ ಕಾಸ್ಟ್ ಎಷ್ಟು ಎಂದರೆ 15 ರಿಂದ 20 ಸಾವಿರ ರೂಪಾಯಿಗಳು ಸ್ವಾಮಿ. ಹೇಗೆ ಇದೆ ನೋಡಿ ಸ್ವಾಮಿ? ಆ ಟಾಯ್ಲೆಟ್‌ನ್ನು ಎಲ್ಲಿ ಕನ್ಸ್ಟ್ರಕ್ಷನ್ ಮಾಡಿದ್ದಾರೆಂದರೆ, ಪಾರ್ಕಿನಲ್ಲಿ ಕಟ್ಟಿದ್ದಾರೆ, ಅಲ್ಲಿ ಜನರು ಇಲ್ಲ, ಅಲ್ಲಿ ಯಾರು ಹೋಗುತ್ತಾರೆಂದರೆ ಟಾಯ್ಲೆಟ್‌ಗೆ ಬೆಂಜ್‌ಕಾರ್‌ನಲ್ಲಿ ಹೋಗುವವನು. ಅಲ್ಲಿ ಟಾಯ್ಲೆಟ್‌ಗೆ ಮಾತ್ರ ಹೋಗಬಹುದು. ಆ ಟಾಯ್ಲೆಟ್‌ಗಳನ್ನು ಯಾರು ಕಟ್ಟಿದರು. Who are living in this place? In BGML area 240 toilets are there, but no water facility*. ಅದರ ಬಗ್ಗೆ ನಾವು ಚಂತನೆಯನ್ನು ಇಟ್ಟುಕೊಳ್ಳಬೇಕು. ಅದನ್ನು ನಾನು ನಿಮ್ಮ ನೋಟೀಸಿಗೆ ತೆಗೆದುಕೊಂಡು ಬಂದರೆ, ನಿಮ್ಮ ಅಧಿಕಾರಿಗಳು ಏನು ಹೇಳುತ್ತಾರೆಂದರೆ, ನಾವು ಒಳ್ಳೆಯದನ್ನು ಮಾಡಿದರೆ ಇವರು ಟೀಕೆ ಮಾಡುತ್ತಾರೆಂದು No, immediately you should put order and suspend the officer and throw them out. ಅವರಿಗೆ ಯಾರ ಭಯವು ಇಲ್ಲ ಸ್ವಾಮಿ, ಬ್ಯುರೋಕ್ರಟಸ್ ಆಡ್ಮಿನಿಸ್ಟ್ರೇಷನ್‌ನಲ್ಲಿ ಈಗ ತಾವು ನಮ್ಮನ್ನು ಕುಳಿತುಕೊಳ್ಳಿ ಎಂದರೆ ನಾವು ಕುಳಿತುಕೊಂಡು ಬಿಡುತ್ತೇವೆ, ನಮಗೆ ಅಷ್ಟೊಂದು ಭಯ ಇದೆ. ನಾವು ಯಾರಿಗೂ ಭಯ ಇಟ್ಟುಕೊಳ್ಳುವ ಅವಶ್ಯಕತೆ ಇಲ್ಲ, ನಾವು ಯಾರಿಗೆ ಭಯ ಇಟ್ಟುಕೊಳ್ಳಬೇಕು ನಮ್ಮ ಜನರದ್ದು. To whom I should be faithful my people. ಇವರಿಗೆ ನಾವು ಏಕೆ ಫೇಡ್‌ಫುಲ್ ಆಗಿರಬೇಕು? ನಾನು ಯಾರಿಗೂ ಲೆಟರ್‌ನಲ್ಲೂ ಬರೆಯುವುದಿಲ್ಲ yours faithfuly ಎಂದು. ನಾನು ಏಕೆ ಇವರಿಗೆ ಫೇಡ್‌ಫುಲ್, ನಾನು ಏನು ಇವರ ಊಟವನ್ನು ತಿಂದಿದ್ದೇನಾ? ನಾನು ನನ್ನ ಜನರಿಗೆ ಫೇಡ್‌ಫುಲ್ I should be obedient to my people. ಆ ಫೇಥ್ ಮತ್ತು ಓಬಿಡಿಯಂಟ್‌ನ್ನು ನಾನು ಯಾವಾಗಲೂ ನಿಮ್ಮ ಮೇಲೆ ಇಟ್ಟುಕೊಂಡಿದ್ದೇನೆ. I am proud because ... ಯಾವ ಜನ ನಮ್ಮನ್ನು ಆರಿಸಿಕಳುಹಿಸಿದ್ದಾರೆ ಅವರ ಬಗ್ಗೆ ನಾವು ಚಿಂತನೆ ಇಟ್ಟುಕೊಂಡು ಅವರನ್ನು ನಾವು ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತೇವೆ. ನಾವು ಯಾವ ಅಧಿಕಾರಿಯನ್ನು ಕೇರ್ ಮಾಡುವುದಿಲ್ಲ. Your bureaucrats' activities are like a butcher. They are not bothered about the legislators. They are commanding the legislators ಕಾರಣವೇನು. The concerned minister, if he takes him to task this will not happen. When we bring it to your notice you will believe

us. ಶಾಸಕರನ್ನು ನೀವು ನಂಬುವುದಿಲ್ಲ, ಇವರು ಯಾವಾಗಲೂ ನಮ್ಮನ್ನು ಅಪೊಜಿಷನ್‌ದಲ್ಲಿ ಇರುವವರು ಎನ್ನುವ ರೀತಿಯಲ್ಲಿ ನೋಡುವುದು. ನಮ್ಮನ್ನು ಕಾಮಾಲೆ ಕಣ್ಣಿನಿಂದ ನೋಡುವುದು, ನಾವು ಸುಳ್ಳು ಹೇಳುತ್ತೇವೆಂದು ತಿಳಿದುಕೊಂಡಿದ್ದೀರಿ. What affects me will affect you also. ಒಬ್ಬ ಶಾಸಕನು ಹೋಗಿ ಯಾವುದಾದರೊಂದು ಲೆಟರ್‌ನ್ನು ಕೊಟ್ಟರೆ, it is their bounden duty to respect. ಅದು ಆಗುವುದಿಲ್ಲವೆಂದರೆ, we will bring it to the Minister's notice. When a Minister says, they have to obey. They may say ರೂಲ್ ಇದೆ, ಎಂದು ಹೇಳುತ್ತಾರೆ ನಾವು ಓದಿಲ್ಲವೇ, ನಾವು ಹೆಬ್ಬೆಟ್ಟಿನವರೇ? ನಾವೂ ಓದಿದ್ದೇವೆ, When we bring it to their notice ಮಾಡುತ್ತೇವೆಂದು ಹೇಳಿ ಅದನ್ನು ಇಟ್ಟುಬಿಡುತ್ತಾರೆ ಸ್ವಾಮಿ. Even for six months they don't touch. To whom we have to tell? Within two minutes I will finish ನಾನು ತಮ್ಮ ಗೌರವವನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ, because you have given me an opportunity for me ರೂಲ್-69ರ ಮೇರೆಗೆ ಮಾತನಾಡಿದಾಗ ಗೌರ್ನರ್ ಸ್ಪೀಚ್ ಮೇಲೆ ಮಾತನಾಡಬೇಕೆಂದು ಹೇಳಿದಿರಿ, The Deput Chief Minister Sir, just see how the administration is. ಡಬಲ್‌ರೋಡ್ ಮಾಡುವುದಕ್ಕೆ ನಾವು ಅನ್‌ಆಥರೈಸ್ಡ್ ಬಿಲ್ಡಿಂಗ್ಸ್‌ನ್ನು ಡೆಮಾಲಿಷ್ ಮಾಡಿ ಅಂದರೆ ನಮ್ಮ ಕಮಿಷನರ್ ಹೇಳುತ್ತಾರೆ, ಅದು ರೆಸಲ್ಯೂಶನ್‌ದಲ್ಲಿ ಆಗಬೇಕು ಸರ್ ಎಂದು ರೆಸಲ್ಯೂಶನ್‌ದಲ್ಲಿ ಬೇಡವೆಂದರೆ ಏನು ಮಾಡುತ್ತೀರಿ? ಅದನ್ನು ಒಡೆಯುವುದಕ್ಕಾಗುವುದಿಲ್ಲ. I brought it to the notice of the Deputy Commissioner who is the Administrator of that municipality ಇಲ್ಲೀಗಲ್ ಆಗಿರುವುದರಿಂದ ಅದನ್ನು ಕಾನೂನಿನ ಪ್ರಕಾರ ಒಡೆಯಬೇಕು ಆದರೆ ಕೌನ್ಸಿಲರ್‌ಗಳು ಏನು ಹೇಳುತ್ತಾರೋ ಎಂದು ಯೋಚನೆ ಮಾಡುತ್ತಾರೆ. ಕೌನ್ಸಿಲರ್‌ಗಳು ಇರಬೇಕೆಂದು ಹೇಳುತ್ತಾರೆ, ಬೇಡವೆಂದರೆ ಏನು ಮಾಡುತ್ತೀರಿ; ಅದರ ಬಗ್ಗೆ ನಾನು ಕೇಳುತ್ತೇನೆ. ಅದರ ಬಗ್ಗೆ ಚಿಂತನೆಯನ್ನು ಮಾಡೋಣ. Now I have ro come to the Municipal Director. Municipal Director will say I have to speak to the Commissioner. Then I have to speak to the concerned minister. ಆ ತರಹ ಇದ್ದರೆ ನೀವು ತೆಗೆದುಕೊಂಡು ಬಂದು ಕೊಡಿ, ನಾನು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಅನ್ನುತ್ತಾರೆ. ಈಗ 6 ತಿಂಗಳಾಯಿತು, ಯಾವ ಕ್ರಮ ತೆಗೆದುಕೊಳ್ಳುತ್ತೀರಿ? See, automatically this road work will stop. My real works will be stopped forcing me to bring to the notice of the administration or the concerned minister a number of times for simple things unnecessarily I should bring to the notice of the minister for "major" works, not small works. ಅದಕ್ಕಾಗಿ ನಿಮ್ಮ ಜೊತೆಯಲ್ಲಿ ಸಬಾರ್ಡಿನೇಟ್‌ಗಳು ಇರುವುದು. ಎಷ್ಟರ ಮಟ್ಟಿಗೆ ಅಡ್ಮಿನಿಸ್ಟ್ರೇಶನ್, is there? This should not happen. Coming to Scheduled Castes and Scheduled Tribes people, the Government should

---

* ಈ ಪದಗಳನ್ನು ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತವಾದ ತೆಗದುಹಾಕಲಾಗಿದೆ

take a bold stand. ಬಿಇಎಂಎಲ್, ಹೆಚ್ಎಎಲ್ ಫ್ಯಾಕ್ಟರಿಗಳಲ್ಲಿ ಏನು ಮಾಡುತ್ತಾರೆಂದರೆ, ಹಾರ್ಟ್ ಪ್ರಾಬ್ಲಂ ಎನ್ನುವುದು ಈಗ ಒಂದು ಫ್ಯಾಷನ್ ಆಗಿಬಿಟ್ಟಿದೆ. 45–50 ವರ್ಷ ಆದರೆ ಇವನೇ ಕ್ಲೀನ್ ಮಾಡಿಕೊಂಡು ಬರುವ ತರಹಃ ಸ್ಟೈಲಾಗಿ ಹೋಗಿ ಬರುತ್ತಾನೆ; ಆಸ್ಪತ್ರೆ ಆ ತರಹ ಇವತ್ತು ಸೈಂಟಿಫಿಕ್‌ನಲ್ಲಿ ಆಗಿಬಿಟ್ಟಿದೆ. ಅಂತಹ ಸಂದರ್ಭಗಳಲ್ಲಿ the scheduled caste and scheduled tribe people have no money. They can't even go to a general hospital. The people are with you, Hon'ble Chief Minister A number of scheduled caste and scheduled tribe people during election time come forward to vote; ಚೀಫ್ ಮಿನಿಸ್ಟರ್ ಫಂಡ್ ಏತಕ್ಕಾಗಿ ಇದೆ? ಹಾರ್ಟ್ ಮತ್ತು ಕಿಡ್ನಿ ಪ್ರಾಬ್ಲಮ್ ಇದ್ದವರಿಗೆ the government should take full payment to give treatment for scheduled castes adn scheduled tribes. ಆ ತರಹ ಒಂದು ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದು. ಇದರ ಬಗ್ಗೆ ಮಾನ್ಯ ದೇವರಾಜ್ ಅರಸ್‌ರವರನ್ನು ನೆನಸಿಕೊಳ್ಳಬೇಕು. He was the only man, who had taken a bold decision to do service to the poorest people. ಈಗ ಇರುವ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅವರ ಕಾಲದಲ್ಲಿ ಷೆಡ್ಯೂಲ್ ಕಾಸ್ಟ್‌ನವರಿಗೆ ಹಾರ್ಟ್ ಮತ್ತು ಕಿಡ್ನಿ ಪ್ರಾಬ್ಲಮ್ ಚಿಕಿತ್ಸೆಗೆ ಖರ್ಚಾಗುವ ಪೂರ್ತಿ ಹಣವನ್ನು ಸರ್ಕಾರವೇ ಅವರನ್ನು ಕೊಟ್ಟು ಕಾಪಾಡಬೇಕು. It is a credit for the entire scheduled caste and scheduled tribe people & you will remain in the history of Karnataka for ever.

ಅಧ್ಯಕ್ಷರು: ಮಾನ್ಯ ರಾಜೇಂದ್ರನ್‌ರವರೇ, ತಾವು ಬೇಗ ಮುಗಿಸಿ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ಹಾಗಾದರೆ ಅದನ್ನು ಹೇಳುವುದು ಬೇಡವೆಂದು ಅನ್ನುತ್ತೀರಾ? ಕೊಡಗು ಜಿಲ್ಲೆಗೆ ಸೈನಿಕ ಶಾಲೆ ಕೊಟ್ಟಿರುವುದುರಿಂದ ನಮಗೆ ಬಹಳ ಸಂತೋಷವಾಗಿದೆ. ನಮ್ಮ ಕ್ಷೇತ್ರಕ್ಕೂ ಒಂದು ಕೊಡಿ. ಪಾರ್ಲಿಮೆಂಟರಿ ಪ್ರೊಸೀಜರ್‌ಗಳನ್ನು ಟ್ರಾನ್ಸ್‌ಲೇಶನ್ ಮಾಡಿರುತ್ತೇವೆಂದು ಇಲ್ಲಿ ಕೊಟ್ಟಿರುತ್ತಾರೆ. I quote:

> "During the year 2004, 31 Acts have been enacted and 4 Ordinances have been promulgated by the State Government. The authorised texts of Kannada translation of 11 Central Acts have been published. Further, translation ..... will be taken up.

ಟ್ರಾನ್ಸ್‌ಲೇಶನ್ ಏನು ಮಾಡುತ್ತೇವೆಂದು ಹೇಳಿದ್ದಾರೆ, ಅದನ್ನು ಬೇಗ ಮಾಡಬೇಕು. ಈಗ ಬೇಕಾದಷ್ಟು ಪಾಯಿಂಟ್ಸ್‌ಗಳು ಇದೆ, ಅವುಗಳಿಗೆ ನಾವು Kaul and Shakdher book ಅನ್ನು ರೆಫರ್ ಮಾಡಬೇಕಾಗಿದೆ. ನಾನು ಇಂಗ್ಲೀಷ್‌ನಲ್ಲಿ ಓದುತ್ತೇನೆ. ಅಲ್ಲಿ ನಾವೆಲ್ಲರೂ ಏನು ಮಾತನಾಡುತ್ತೇವೆ. ಕನ್ನಡವನ್ನು ಬೆಳಸಬೇಕು, ಕನ್ನಡ ಗೊತ್ತಿರಬೇಕು, ಎಂದು ಎಲ್ಲಿ ಟ್ರಾನ್ಸ್‌ಲೇಶನ್ ಮಾಡಲಾಗಿದೆ? ಪಾರ್ಲಿಮೆಂಟರಿ ಪ್ರೊಸೀಜರ್‌ಗಳನ್ನು ಬೇಗ ಕನ್ನಡದಲ್ಲಿ ಟ್ರಾನ್ಸ್‌ಲೇಶನ್ ಮಾಡಿದರೆ ನನಗೂ ಕೂಡ ಅದನ್ನು ಓದಿ ಮಾತನಾಡಲು ಅವಕಾಶವಾಗುತ್ತದೆ. Ultimately, ಸಿರಿಕಲ್ಚರ್ ಬಗ್ಗೆ ಯಾವುದನ್ನೂ

ಕೊಟ್ಟಿಲ್ಲ, ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಪರ್ಮಿಷನ್ ಕೊಟ್ಟಿದ್ದೀರಿ,. Within a minute, I am bringing to the notice of my respectful Sericulture Minister, that Kolar is famous for silk, milk and gold. ಈಗ ಗೋಲ್ಡ್ ಮುಚ್ಚಿದ್ದಾರೆ, ಈಗ ಸಿಲ್ಕ್‌ನ್ನೂ ಕೂಡ ಮುಚ್ಚಿಬಿಟ್ಟರೆ, ಅಲ್ಲಿ ಹಾಲೂ ಕೂಡ ಕಡಿಮೆಯಾಗಿದೆ, ನಮ್ಮ ಗತಿ ಅಷ್ಟೆ, ಕೋಲಾರ ಡಿಸ್ಟ್ರಿಕ್ಟ್‌ನ್ನು ಮುಚ್ಚಿಬಿಡಬೇಕಾಗುತ್ತದೆ. ಅಂತಹ ಸ್ಥಿತಿಗೆ ತಾವು ಬರಬಾರದು because my people are depending on silk. ನಿಮ್ಮ ಸಿಲ್ಕ್ ಇಂಡಸ್ಟ್ರೀ ಏನು ಮಾಡುತ್ತಾರೆಂದರೆ, ಅವರು ಏನು ಕೆಲಸ ಮಾಡಬೇಕು, ಸರ್ಕಾರದಿಂದ ಆ ಕಂಪನಿಗೆ ಏನು ಅಮೌಂಟ್‌ನ್ನು ಕೊಟ್ಟಿದ್ದಾರೆ, ಅದನ್ನು ದುರುಪಯೋಗಪಡಿಸಿಕೊಂಡಿದ್ದಾರೆ. They misutilised ಆ ಕಂಪನಿ ಇಂತಹ ಸ್ಥಿತಿಗೆ ಹೋಗುವುದೆಂದರೆ, already a number of KGF people have lost their jobs. Now Kolar people will have to lose the jobs. You have to take a very serious action on this. Running illegaly petrol bunks relating in loss of several lakhs of rupees. ಆ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಮಾಡುವುದಕ್ಕೆ ಒಂದು ಫ್ರೇಮ್‌ವರ್ಕ್ ಮಾಡಿ ಇದರಲ್ಲಿ ನೀವು ಡೆವಲಪ್‌ಮೆಂಟ್ ಮಾಡಬೇಕು. Without seeking the permission of the Government, the Managing Director has purchased some petrol bunks, that is also running under loss. ಕಾನೂನು ಬದಲಾವಣೆ ಮಾಡಿ, ಅಲ್ಲಿ ಕಾನೂನನ್ನು ವೈಲೇಶನ್ ಮಾಡಿದ್ದಾರೆ, ನಾವು ಯಾರಾದರೂ ಎಲೆಕ್ಷನ್‌ದಲ್ಲಿ ಕಾನೂನನ್ನು ವೈಲೇಶನ್ ಮಾಡಿದರೆ ಡಿಸ್‌ಕ್ವಾಲಿಫೈ ಮಾಡುತ್ತೀರಿ. Can you terminate the Managing Director who has done wrongful things? He has not taken the permission of the Government for giving advertisements. There is KSIC, the company which is under loss which has spent Rs. 20 lakhs for buying six cars and on show-rooms, and also on flight charges. Where is the development? ನಿಮ್ಮ ಕಂಪನಿಗೆ ಇದು ಬೇಕೇ? 6 ಕಾರು ಇಂತಹ ಕಂಪನಿಗೆ ಬೇಕಾ? ಫ್ಲೈಟ್‌ನಲ್ಲಿ ಹೋಗುವುದು ಬೇಕೇ? ಇದನ್ನೇ ಬೇರೆ ಯಾರಾದರೂ ಮಾಡಿದ್ದರೆ, 5 ದಿವಸ ಇವನು ಕೆಲಸಕ್ಕೆ ಬಂದಿಲ್ಲವೆಂದು ಒಂದು ಲೆಟರ್ ಕೊಟ್ಟು ಟರ್ಮಿನೇಟ್ ಮಾಡಿಬಿಡಿ ಎಂದು ಹೇಳುತ್ತಾರೆ. ಒಂದು ಫೋನ್ ಹೇಳಿಬಿಟ್ಟು ಹೋಗಿಲ್ಲವೆಂದರೆ ಅಧಿಕಾರಿಗಳು ಅವರನ್ನು ಸಸ್ಪೆಂಡ್ ಮಾಡಿಬಿಡುತ್ತಾರೆ, ಆದರೆ ಇವರಿಗೆ ಯಾರೂ ಏನೂ ಮಾಡುವುದಿಲ್ಲ.

ಶ್ರೀ ಸಿ. ಚೆನ್ನಿಗಪ್ಪ (ರೇಷ್ಮೆ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇದರ ಬಗ್ಗೆ ಅಲಿಗೇಷನ್‌ನ್ನು ಮಾಡಿದ್ದೀರಿ. ನಮ್ಮ ಸರ್ಕಾರ ಆ ವಿಚಾರದಲ್ಲಿ ಯಾವುದೇ ಮುಲಾಜು ಇಲ್ಲದೆ ಎನ್‌ಕ್ವಯರಿ ಮಾಡಿಸಿ ಆ್ಯಕ್ಷನ್‌ನ್ನು ತೆಗೆದುಕೊಂಡಿದೆ. ಅದರ ಬಗ್ಗೆ ತಾವು ಕನ್‌ಫರ್ಮ್ ಆಗಿ ಇರಬಹುದು.

ಶ್ರೀ ಎಸ್. ರಾಜೇಂದ್ರನ್: ಎನ್‌ಕ್ವಯರಿ ಮಾಡಬಾರದು, ಸಸ್ಪೆಂಡ್ ಮಾಡಿ ಎನ್‌ಕ್ವರಿಯನ್ನು ಮಾಡಬೇಕು. ಆಗ ಅವರಿಗೆ ಭಯ ಬರುತ್ತದೆ. ಎನ್‌ಕ್ವಯರಿ ಮಾಡುವಂತಹ ಸಮಯದಲ್ಲಿ ಶಾಸಕರು ನಮಗೆ ಹೇಳಿದರು ಸಾರ್ ಅವರ ಮಾತನ್ನು ಕೇಳದೆ ಇರುವುದಕ್ಕಾಗಿ ನಿಮಗೆ ಈ ರೀತಿ

ಹೇಳಿದ್ದಾರೆ ಎಂದು ಹೇಳುತ್ತಾರೆ. ಈ ರೀತಿಯಾಗಿ ಅವರು ಸುಳ್ಳು ಹೇಳುತ್ತಾರೆ. There is an evidence spending lakhs of rupees as gifts. ಏನು ಗಿಫ್ಟ್? ನಿಮ್ಮ ಕಂಪನಿಯೂ ಲಾಸ್ ದುಡ್ಡು ಬೇರೆ ಕೊಡಬೇಕಾ ನಿಮಗೆ? The Managing Director entitle for official accomadation, if he don't have house in that place. But he is having his own house and collecting rent Rs. 15,000 from you. Is it not cheating. ಇದಕ್ಕಿಂತ ನಿಮಗೆ ಇನ್ನೇನು ಎವಿಡೆನ್ಸ್ ಬೇಕು?

ಅಧ್ಯಕ್ಷರು: ರಾಜೇಂದ್ರನ್‌ರವರೇ, ತಾವು ಬೇಗನೆ ಮುಗಿಸಬೇಕು.

ಶ್ರೀ ಎಸ್. ರಾಜೇಂದ್ರನ್: ಅಧ್ಯಕ್ಷರೆ, ನಾನು ಬೇಗನೆ ಮುಗಿಸುತ್ತೇನೆ.

ಅಧ್ಯಕ್ಷರು: ತಾವು ಮುಗಿಸುತ್ತೇವೆಂದು ಹೇಳು ಮಾತನಾಡುತ್ತಿದ್ದಿರಲ್ಲಾ? ಬಹಳ ಜನರು ಮಾತನಾಡುವವರು ಇದ್ದಾರೆ. ನಿಮಗೆ ಅರ್ಥವಾಗುವುದಿಲ್ಲವಲ್ಲಾ.

ಶ್ರೀ ಎಸ್. ರಾಜೇಂದ್ರನ್: ಸನ್ಮಾನ್ಯ ಅಧ್ಯಕ್ಷರೇ, There is company auditor. But he appointed a private hired company for auditing his files. There is Accountant General's office. You can utilise their services. When the company is sick, the industry is sick, when the company is in loss, you appoint a private Advocates why? To safeguard your boundary for you, to safeguard for auditing for you. When you have State Government auditors, you can do it. There are all evidences for the mis-use of power and causing loss to the Government.

ಶ್ರೀ ಸಿ. ಚೆನ್ನಿಗಪ್ಪ (ರೇಷ್ಮೆ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಗುರುತರವಾದಂತಹ ಅಪಾದನೆಯನ್ನು ಇವತ್ತು ಎತ್ತಿದ್ದಾರೆ. ಅದರ ಬಗ್ಗೆ ತನಿಖೆಯನ್ನು ಮಾಡಿಸಿ ನಮ್ಮ ಇಲಾಖೆಯಲ್ಲಿ ಅತರಹವಾದ ಅನ್ಯಾಯವಾಗಿದ್ದರೆ ನಮ್ಮ ಸರ್ಕಾರ ಯಾವುದೇ ವಿಚಾರದಲ್ಲಿ ಅವರನ್ನು ಕ್ಷಮಿಸುವುದಿಲ್ಲ. ಅದರ ಬಗ್ಗೆ ಆ್ಯಕ್ಷನ್ ತೆಗೆದುಕೊಳ್ಳುವ ಬಗ್ಗೆ ಹಿಂದೂ ಮುಂದು ನೋಡುವುದಿಲ್ಲ.

ಶ್ರೀ ಎಸ್. ರಾಜೇಂದ್ರನ್: ನೀವು ಇಷ್ಟು ಅವಕಾಶವನ್ನು ಕೊಟ್ಟಿರುವುದಕ್ಕಾಗಿ ಬಹಳ ಸಂತೋಷ. ಜಿಲ್ಲಾ ಮಂತ್ರಿಯವರೆ, ಬಡವರ ದುಡ್ಡನ್ನು ಸರ್ಕಾರ ತಿಂದು ಮಹಾರಾಜರ ತರಹ ನೀವೆಲ್ಲರೂ ಕುಳಿತುಕೊಂಡಿದ್ದೀರಿ. ಡಿ.ಸಿ.ಸಿ. ಬ್ಯಾಂಕಿನಲ್ಲಿ ಇಟ್ಟಿದ್ದು ವಿ.ಆರ್.ಎಸ್. ತೆಗೆದುಕೊಂಡವರ ಹಣದ ಬಗ್ಗೆ ನಾನು ತುಂಬಾ ನೊಂದ ಮನಸ್ಸಿನಿಂದ ಒಂದು ಮಾತನ್ನು ಹೇಳುತ್ತೇನೆ. ನಮ್ಮ ಜನರು ವಿಆರ್‌ಎಸ್‌ನಿಂದ ಬಂದ ಹಣವನ್ನು 10 ಸಾವಿರ ಫೀಟ್ ಅಂಡರ್‌ಗ್ರೌಂಡ್‌ನಲ್ಲಿ ಹೋಗಿ ಮಾಡಿರುವಂತಹ ದುಡ್ಡು ಡಿಸಿಸಿ ಬ್ಯಾಂಕ್‌ಗಳಲ್ಲಿ ಡೆಫಾಸಿಟ್‌ನ್ನು ಮಾಡಿದರೆ 100 ರೂಪಾಯಿಗಳನ್ನು ಹೆಚ್ಚಿಗೆ ಕೊಡುತ್ತೇವೆ ಅಂತ ಇವರು ಇಟ್ಟಂತಹ ಹಣವನ್ನೆಲ್ಲಾ ತಿಂದುಬಿಟ್ಟು ಇವನು ಕೇಳಿದರೆ ಏನು ಮಾಡುವುದು? ಲೋನ್ ಕೊಟ್ಟುಬಿಟ್ಟಿದ್ದೇವೆಂದು ಹೇಳುತ್ತಾರೆ. ಯಾರಿಗೆ ಕೊಟ್ಟಿದ್ದಾರೆ ಲೋನ್? K.G.F. is not an agriculturist area. You have taken all my K.G.F. peoples money and deposited somewhere. Illegally you have given lakhs of

rupees. To-day they are saying. ಬಡ್ಡಿನೂ ಇಲ್ಲ, ಕ್ಯಾಪಿಟಲ್ ಇಲ್ಲ ಎಂದು ಹೇಳಿದರೆ, Both of you are sitting here. None of the ministers have taken action on that. ಅವರು 30 ವರ್ಷಗಳ ಕಾಲ ಸರ್ವಿಸ್ ಮಾಡಿ ಏಆರ್‌ಎಸ್‌ನಿಂದ ಕಂಪನಿಯನ್ನು ಮುಚ್ಚಿ ದುಡ್ಡು ತೆಗೆದುಕೊಂಡಿದ್ದವರ ದುಡ್ಡನ್ನು ತಿಂದಿಬಿಟ್ಟಿದ್ದಾರೆ. ಬೋರ್ಡ್ ಆಫ್ ಡೈರೆಕ್ಟರ್‌ಗಳು ಲ್ಯಾನ್ಸರ್ ಕಾರುಗಳಲ್ಲಿ ಬರುತ್ತಾರೆ. ದುಡ್ಡಿಲ್ಲವೆಂದು ಹೇಳುತ್ತಾರೆ, ಹಾಗಾದರೆ ಹಣವನ್ನು ತಿಂದಿರುವವರು ಯಾರು ಸಾರ್? ಆ ಹಣ ಬಡವರದ್ದು, ಹಾಗಾದರೆ ಸರ್ಕಾರ ಇದೇನಾ? ಹಾಗಾದೆ ನಾನು ಏನೂ ಹೇಳುವುದಿಲ್ಲ. ಸರ್ಕಾರವೇ ಜನರನ್ನು ಹೊಡೆದರೆ ಬೇಲಿಯೇ ಪೈರನ್ನು ತಿಂದರೆ ನಾನು ಯಾರ ಹತ್ತಿರ ಹೋಗಿ ಹೇಳುವುದು? ಇದರ ಬಗ್ಗೆ ತಾವು ಹೇಳಬೇಕು.

ಶ್ರೀ ಎ. ಸೋಮಣ್ಣ (ಬಿನ್ನಿಪೇಟೆ): ಮಾನ್ಯ ಅಧ್ಯಕ್ಷರೆ, ಈ ಡಿಸಿಸಿ ಬ್ಯಾಂಕ್‌ಗಳು ಪ್ರಾಯಶಃ ಇತ್ತೀಚಿನ ದಿನಗಳಲ್ಲಿ ಬಿಳಿ ಆನೆಗಳಾಗಿವೆ ವಿಶೇಷವಾಗಿ ವಯಸಾಗಿರತಕ್ಕಂತಹ ಬಹುತೇಕ ಆಫಿಷಿಯಲ್ಸ್ ರಿಟೈರ್ಡ್ ಆಗಿರುವವರು ನ್ಯಾಷನಲೈಡ್ ಬ್ಯಾಂಕಿನಿಂದ ಬಡ್ಡಿ ಒಂದು ಮತ್ತು ಒಂದೂವರೆ ಪರ್ಸೆಂಟ್ ಜಾಸ್ತಿ ಬರುತ್ತದೆಂದು ಡೆಫಾಸಿಟ್ ಇಟ್ಟಿರುವುದು ಈಗ ಅವರೆಲ್ಲರೂ ಬೀದಿಪಾಲಾಗಿದ್ದಾರೆ. ಕೇವಲ ಇದು ಕೋಲಾರದಲ್ಲಿ ಮಾತ್ರವಲ್ಲ, ಬೆಂಗಳೂರು ನಗರದಲ್ಲಿ ರಾಜ್ಯದ ಮೂಲೆಮೂಲೆಗಳಲ್ಲೂ ಕೂಡ ಆಗುತ್ತಿದೆ. ಇದರ ಬಗ್ಗೆ ಸರ್ಕಾರದವರು ಗಂಭೀರವಾಗಿ ಚಿಂತನೆಯನ್ನು ಮಾಡದೆಹೋದರೆ ಬಹಳ ಕಷ್ಟವಾಗುತ್ತದೆ. ವಿಶೇಷವಾಗಿ 2 ರಿಂದ 4 ಲಕ್ಷ ರೂಪಾಯಿಗಳು ಏನು ಡೆಫಾಸಿಟ್ ಇಟ್ಟಿದ್ದಾರೆ ಅವರೆಲ್ಲರೂ ಮನೆಗಳಲ್ಲಿ ಪಾಪ ಎಷ್ಟೊಂದು ತೊಂದರೆ ಅನುಭವಿಸುತ್ತಿದ್ದಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸಿಂಧ್ಯಾರವರು ಇದರ ಬಗ್ಗೆ ಕುಳಿತುಕೊಂಡು ಹೇಳುತ್ತಿದ್ದರು. ನಾನು ತಮ್ಮ ಮೂಲಕ ಸರ್ಕಾರದವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇದಕ್ಕೆ ಯಾರ್ಯಾರು ಎಷ್ಟೆಷ್ಟು ಹೊಣೆಗಾರರು ಎನ್ನುವುದಕ್ಕಿಂತ ಹೆಚ್ಚಾಗಿ ಕೆಲವರನ್ನಾದರೂ ಕೂಡ ಗುರುತಿಸಿ 10 ಲಕ್ಷ ರೂಪಾಯಿಗಳ ಪ್ರಾಪರ್ಟಿಗೆ 10 ಕೋಟಿ ರೂಪಾಯಿಗಳನ್ನು ಕೊಟ್ಟು ಇಲ್ಲದ ಬೇನಾಮಿ ಹೆಸರಿನಲ್ಲಿ ಮಾಡಿರತಕ್ಕಂತಹ ಹಗರಣವು ಏನಿದೆ, ಇದು ನಿಜವಾಗಲೂ ಕೂಡ ಅದರೊಳಗೂ ಕೂಡ ಇದು ಸರ್ಕಾರದ ವ್ಯಾಪ್ತಿಯಲ್ಲಿ ಬರುವಂತಹ ಇಂತಹ ಕೋ-ಅಪರೇಟಿವ್ ಇಲಾಖೆಯಲ್ಲಿ ಇರತಕ್ಕಂತಹ ಈ ಬ್ಯಾಂಕುಗಳ ಅವ್ಯವಹಾರದ ಬಗ್ಗೆ ತತ್‌ಕ್ಷಣವೇ ಕ್ರಮವನ್ನು ತೆಗೆದುಕೊಳ್ಳದೆ ಹೋದರೆ ಸಹಸ್ರಾರು ಜನರಿಗೆ ಅನಾನುಕೂಲವಾಗುತ್ತದೆ. ಇದರ ಬಗ್ಗೆ ಸರ್ಕಾರದ ಚಿಂತನೆಯನ್ನು ಮಾಡಬೇಕಾಗುತ್ತದೆ.

ಶ್ರೀ ಎಸ್.ಎಲ್. ಧರ್ಮೇಗೌಡ (ಬೀರೂರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ರಾಜೇಂದ್ರನ್‌ರವರು ಮಾತನಾಡಿದಂತಹ ಅವರ ಸ್ಥಳೀಯವಾದ ಡಿಸಿಸಿ ಬ್ಯಾಂಕ್ ಮತ್ತು ಮಾನ್ಯ ಸೋಮಣ್ಣನವರು ಹೇಳಿದಂತಹ ಸ್ಥಳೀಯ ಡಿಸಿಸಿ ಬ್ಯಾಂಕ್ ದಯಮಾಡಿ ರಾಜ್ಯದ ಎಲ್ಲಾ ಡಿಸಿಸಿ ಬ್ಯಾಂಕ್ ಎಂದು ಹೇಳತಕ್ಕಂತಹ ಮಾತನ್ನು ಕಡತದಿಂದ ಮೊದಲು ವಾಪಸ್ಸು ತೆಗೆದುಕೊಳ್ಳಬೇಕು. ನಾನು ಚಿಕ್ಕಮಗಳೂರು ಸಹಕಾರ ಬ್ಯಾಂಕಿನ ಅಧ್ಯಕ್ಷನಾಗಿ ಹೇಳುತ್ತಿದ್ದೇನೆ. ರಾಜ್ಯದಲ್ಲಿ ಸಾವಿರಾರು ರೈತರಿಗೆ ಅನುಕೂಲ ಮಾಡತಕ್ಕಂತಹ ಜಿಲ್ಲಾ ಸಹಕಾರ ಬ್ಯಾಂಕುಗಳು ಈ ರಾಜ್ಯದಲ್ಲಿದೆ. ಆದ್ದರಿಂದ ತಾವು ದಯಮಾಡಿ ಡಿಸಿಸಿ ಬ್ಯಾಂಕ್ ಎಂದು ಜನರಲ್ ಆಗಿ ಹೇಳಿರತಕ್ಕಂತಹ ಮಾತನ್ನು ತಾವು

ಕಡತದಿಂದ ತೆಗೆದುಹಾಕಬೇಕು. ರೈತಾಪಿ ವರ್ಗದ ಜನರಿಗೆ ಇವತ್ತೂ ಸಹ ಬಹಳಷ್ಟು ಸರ್ಕಾರ ಏನು ಪೋಷಣೆ ಮಾಡಿದೆ 6 ಪರ್ಸೆಂಟ್ ಕೊಡತಕ್ಕಂತಹ ಬಡ್ಡಿಯ ಹಣವನ್ನು ಇವತ್ತು ರೈತಾಪಿ ವರ್ಗದ ಜನರಿಗೆ ನೇರವಾಗಿ ಕೊಡುತ್ತಿದ್ದೇವೆ. ಕೆಲವು ಕಡೆ ಈ ರೀತಿಯಾಗಿರಬಹುದು ನಾನು ಅಲ್ಲಗೆಳೆಯುವುದಕ್ಕೆ ಹೋಗುವುದಿಲ್ಲ. ಇವತ್ತು ಬೆಂಗಳೂರು ನಗರದಲ್ಲಿ ಆಗಿರಬಹುದು, ಕೆಜಿಎಫ್‌ನಲ್ಲಿ ಆಗಿರಬಹುದು, ದಯಮಾಡಿ ಬಹುತೇಕ ಕಡೆಗಳಲ್ಲಿ 100ಕ್ಕೆ 90 ಭಾಗ ಇವತ್ತು ರೈತಾಪಿ ವರ್ಗದವರಿಗೆ ಸಹಾಯಕಾರಿಯಾಗುತ್ತಿದೆ, ಸರ್ಕಾರ ಇದನ್ನು ಗಮನಿಸಬೇಕು.

ಶ್ರೀ ಎಸ್. ರಾಜೇಂದ್ರನ್: ಅಧ್ಯಕ್ಷರೆ, I am closing my speech, thanking you for giving this opportunity, ಡಿಸಿಸಿ ಬ್ಯಾಂಕ್‌ನ ಬಗ್ಗೆ ಈಗ ಏನಾದರೂ ನಮ್ಮ ಜಿಲ್ಲಾ ಮಂತ್ರಿಗಳು ಕೆಜಿಎಫ್‌ಗೆ ಏನಾದರೂ ಕೊಟ್ಟಿಲ್ಲವೆಂದರೆ ನಾಳೇ ಬೆಳಿಗ್ಗೆ ಇದರ ಬಗ್ಗೆ ತಾವು ಉತ್ತರವನ್ನು ಕೊಡಬೇಕು. Because, it is the poorest people's money. We always ust to say the slogans 'Congress is poor'. ಯಾರು ಜನ ಬಡವರು ಇದ್ದಾರೆ ಅವರ ಜೊತೆಯಲ್ಲಿ ಇರುವುದು ಎಂದು.

ಶ್ರೀ ಕೆ.ಎನ್. ರಾಜಣ್ಣ (ಬೆಳ್ಳಾವಿ): Congress is not poor. But they are saying that Congress is pro-poor.

ಶ್ರೀ ಎಸ್. ರಾಜೇಂದ್ರನ್: ನಾನು ಹಾಗೆ ಹೇಳಿಲ್ಲ. ನಾನು ಯಾವಾಗಲೂ ಬಡವರ ಜೊತೆಯಲ್ಲಿರುವವರು, ಬಡವರಿಗೆ ಸಹಾಯ ಮಾಡುವವರು ನಮ್ಮ ಪಕ್ಷ ಎಂದು ಹೇಳಿರುವುದು ತಾನೇ. Congress is not poor. Who says? ಕಾಂಗ್ರೆಸ್ ಪಕ್ಷವು 50 ವರ್ಷದಿಂದ ನೀವೇ ಪರಿಪಾಲನೆ ಮಾಡಿಕೊಂಡು ನೀವು ಮಹಾರಾಜರು ಇಲ್ವಾ. ನಾನು ಇಲ್ಲವೆಂದು ಹೇಳಿದ್ದೇವಾ? ಬಡವರ ಪರವಾಗಿ ಬಾಯಿಯನ್ನು ಓಪನ್ ಮಾಡಿಲ್ವಾ. ಎಲ್ಲಿ? ಸ್ವಾಮಿ ಮಂತ್ರಿಯವರೆ, ನಿಜವಾಗಿಯೂ you must take initial interest, give some assurance. ನೀವು ಹೇಳಿದ ತಕ್ಷಣ I will conclude my speech. What alternative is, you must take serious action. These people they cannot cheat public so easily. Lakhs of rupees, not one or two rupees. Crores of money they have squandeled joyfully. Neither giving interest nor returning their capital. Give a C.B.I. raid or C.O.D. raid. ಸುಮ್ಮನೆ ಸುಳ್ಳು ದಾಖಲೆಗಳನ್ನು ಕೊಡುತ್ತಾರೆ. 10 ಲಕ್ಷ ಅಗ್ರಿಕಲ್ಚರ್ ಎಂದು ಯಾವುದು ಅಗ್ರಿಕಲ್ಚರ್ ಲ್ಯಾಂಡ್ ಇಲ್ಲ, ಸುಳ್ಳು ದಾಖಲೆಗಳನ್ನು ಕೊಟ್ಟು ಹಣವನ್ನು ಲೂಟಿ ಮಾಡಿದ್ದಾರೋ ಅಂತಹವರಿಗೆ ನೀವು ಸಹಾಯವನ್ನು ಮಾಡಿದರೆ how the Government administration can run? You must give some conclusion. ನೀವು ಇದರ ಬಗ್ಗೆ ಉತ್ತರವನ್ನು ಕೊಡಬೇಕು. ನಾನು ಅಧ್ಯಕ್ಷರಿಗೆ ಥ್ಯಾಂಕ್ಸ್ ಹೇಳಬೇಕಾಗುತ್ತದೆ. ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ಅದನ್ನು ತಾವು ಹೇಳಬೇಕು.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರು, ರಾಜೇಂದ್ರನ್‌ರವರು ಎತ್ತಿರುವಂತಹ ಒಂದು ಗಹನವಾದಂತಹ ವಿಷಯವೇ ಆಗಿದೆ. ಈಗಾಗಲೇ ಸರ್ಕಾರ ಸೂಪರ್‌ಸೀಡ್ ಮಾಡಿ ಅದನ್ನು ಜಿಲ್ಲಾಧಿಕಾರಿಗಳನ್ನು ಅಡ್ಮಿನಿಸ್ಟ್ರೇಟರ್‌ನ್ನಾಗಿ ಹಾಕಿ ಅದರ ಬಗ್ಗೆ ಪೂರ್ಣ ಕ್ರಮವನ್ನು

ಜರುಗಿಸುವುದನ್ನು ನಾವು ಮಾಡಿದ್ದೇವೆ. ನಮ್ಮ ಸರ್ಕಾರದ ಬ್ಯಾಂಕ್‌ಗಳಲ್ಲಿ ವಸೂಲಾತಿಯನ್ನು ಈಗ ಸ್ಥಗಿತವಾಗಿದೆ. ಏಕೆಂದರೆ ನಾಳೆ ಬಡ್ಡಿ ಮನ್ನಾ, ಇನ್ನೊಂದು ಮನ್ನಾ ಎಂದು ಹೇಳಿ ನಾವು ಅನೇಕ ಸಂಬಂಧಪಟ್ಟ ಅನೇಕ ಮಂತ್ರಿಗಳು ಅನೇಕ ರೀತಿಯಲ್ಲಿ ವ್ಯಾಖ್ಯಾನಗಳನ್ನು ಮಾಡುತ್ತಿರುವುದರಿಂದ ಇವತ್ತು ನಾವು ನೇರವಾಗಿ ವಸೂಲು ಮಾಡುವ ಬಗ್ಗೆ ನಮಗೆ ತೊಡಕು ಆಗುತ್ತಿದೆ. ಆದರೂ ಕೂಡ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪೂರ್ಣ ಜವಾಬ್ದಾರಿಯನ್ನು ವಹಿಸಿ ಕೆಲಸವನ್ನು ಮಾಡಿಸುತ್ತೇವೆ. ಏನು ಶಾಸಕರಾದ ರಾಜೇಂದ್ರನ್‌ರವರು ಹೇಳಿದ ಹಾಗೆ ಡೆಫಾಸಿಟ್‌ನ್ನು ಆ ಬಡವರು ಬಿಜಿಎಂಎಲ್ ಕಾರ್ಖಾನೆಯವರು, ಅವರು ಬಹಳ ಕಷ್ಟಪಟ್ಟು ಹಣವನ್ನು ಡೆಫಾಸಿಟ್ ಮಾಡಿದ್ದಾರೆ, ಅದಷ್ಟು ಬೇಗ ಹಣವನ್ನು ಕೊಡಿಸುವಂತಹ ಕೆಲಸವನ್ನು ನಾನು ಮಾಡುತ್ತೇನೆ. ಏಕೆಂದರೆ, ಅಲ್ಲಿ ಪರಿಸ್ಥಿತಿ ಬಹಳ ಹದಗೆಟ್ಟಿರುತ್ತದೆ. ಇಲ್ಲವೆಂದು ನಾನು ಹೇಳುತ್ತಿಲ್ಲ. ಅದನ್ನು ಯಾವ ರೀತಿಯಾಗಿ ಪುನಃ ಯಥಾಸ್ಥಿತಿಗೆ ತರುವಂತಹ ಪರಿಸ್ಥಿತಿಗೆ ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಅವರಲ್ಲೂ ಕೂಡ ಒಂದಷ್ಟು ಹಣವನ್ನು ಕೇಳಿ ಸ್ವಲ್ಪ ರಿವ್ಯೂ ಮಾಡುವಂತಹ ಅವಕಾಶಗಳು ಇವೆ. ಸ್ವಲ್ಪ ಅವಕಾಶವನ್ನು ಕೊಡಬೇಕು. ಅದನ್ನು ಮಾಡುತ್ತೇವೆನ್ನುವಂತಹ ಮಾತನ್ನು ತಮ್ಮ ಮೂಲಕ ರಾಜೇಂದ್ರನ್‌ರವರಿಗೆ ಹೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಕೆ. ಎಸ್ ರಾಜಣ್ಣ: ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯಲ್ಲಿ ಏನು ಡೆಫಾಸಿಟರ್ಸ್ ಹಣ ತೊಂದರೆಯಾಗಿರುವ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ರಾಜೇಂದ್ರನ್‌ರವರು ಹೇಳುತ್ತಿರುವ ಮಾತು ಏನಿದೆ ಅದು ಸತ್ಯವಾಗಿದೆ. ನೀವು ಹೇಳುತ್ತಿದ್ದೀರಿ ಏನಾದರೂ ಮಾಡುತ್ತೇವೆಂದು, ಆದರೆ ಏನೂ ಮಾಡುವುದಕ್ಕಾಗುವುದಿಲ್ಲ. ನಿಮ್ಮಲ್ಲಿ 92 ಪರ್ಸೆಂಟ್ ಲೇಡಿಂಗ್ ಅಗ್ರಿಕಲ್ಚರಿಸ್ಟ್‌ನವರಿಗೆ ಕೊಟ್ಟಿದ್ದೀರಿ. ಅವರಿಂದ ವಸೂಲಿ ಮಾಡಿದರೆ ಮಾತ್ರ ಇವರಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಅಗ್ರಿಕಲ್ಚರಿಸ್ಟ್‌ನವರಿಂದ ವಸೂಲಿ ಮಾಡುವುದಿಲ್ಲವೆಂದು ಸರ್ಕಾರದಿಂದ ಸ್ಟೇಟ್‌ಮೆಂಟನ್ನು ಮಾಡಿದ್ದೀರಿ. ನಾವು ಫೋರ್ಸ್‌ಬಲ್ ಆಗಿ ವಸೂಲು ಮಾಡುವುದಿಲ್ಲ. ಜಪ್ತಿ ಮಾಡುವುದಿಲ್ಲ, ದಾವಾ ಹಾಕುವುದಿಲ್ಲವೆಂದು ಎಲ್ಲವನ್ನು ಹೇಳಿದ್ದೀರಿ. ಅದರಿಂದ ನೀವು ಸರ್ಕಾರದಿಂದ ಸಾಫ್ಟ್ ಲೋನ್, ಬ್ಯಾಂಕ್‌ಗೆ ಶೇರ್‌ಕ್ಯಾಪಿಟಲ್ ಕೊಟ್ಟು ಅವರಿಗೆ ಹಣವನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕೇ ಹೊರತು ವಸೂಲಾತಿ ಮಾಡಿ ಅಲ್ಲಿ ತಂದು ಇಲ್ಲಿಂದ ತಂದು ಕೊಡುತ್ತೇವೆಂದು ಹೇಳುವುದು ಸಾಧ್ಯವಿಲ್ಲ. ನೀವು ಬ್ಯಾಂಕ್‌ಗೆ ಶೇರು ಕ್ಯಾಪಿಟಲ್‌ನ್ನು ಕೊಡಬೇಕು. ಅವರು ಡೆಫಾಸಿಟ್ ಇಟ್ಟಿರುವಂತಹ ಹಣ ಏನಿದೆ, ಅವರಿಗೆ ಹಣವನ್ನು ತಲುಪಿಸಿ, ಬ್ಯಾಂಕ್ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು ನೀವು ಅದಕ್ಕೆ ಬೇರೆ ಅಲ್ಟರ್‌ನೇಟೀವ್ ಏನೂ ಇಲ್ಲ. ಸುಮ್ಮನೆ ಜನರನ್ನು ತಪ್ಪುದಾರಿಗೆ ಎಳೆಯುವಂತಹದ್ದು ಸರಿಯಲ್ಲ. ನೀವು ಅವರಿಗೆ ಶೇರು ಕ್ಯಾಪಿಟಲ್‌ನ್ನು ಕೊಡಬೇಕು. ಅದರ ಬಗ್ಗೆ ತಾವು ಯೋಚನೆಯನ್ನು ಮಾಡಬೇಕು.

ಮಾನ್ಯ ಸದಸ್ಯರು: ಈಗ ಕೋಲಾರ್ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕ್ ವಿಚಾರವಾಗಿ ಮಾತನಾಡಬೇಕು ಎಂದರೆ....

ಅಧ್ಯಕ್ಷರು: ಎಲ್ಲಾ ಬ್ಯಾಂಕ್‌ಗಳದ್ದೂ ಇದೆ, ಕುಳಿತುಕೊಳ್ಳಿ. ಈಗ ಪ್ರಶ್ನೋತ್ತರಕ್ಕೆ ಹೋಗೋಣ. It is not a big issue. Please sit down.

ಮಾನ್ಯ ಸದಸ್ಯರು: ಅಲ್ಲಿ ಬಹಳಷ್ಟು ಅವ್ಯವಹಾರ ಆಗಿದೆ.

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ. ಇನ್ನು ಪ್ರಶ್ನೋತ್ತರವನ್ನು ಒಂದು ಗಂಟೆಯಲ್ಲಿ ಮುಗಿಸಬೇಕು. ಸುಮ್ಮನೆ ಎಲ್ಲದಕ್ಕೂ ಎದ್ದುನಿಂತುಕೊಂಡರೆ ಹೇಗೆ? ಈಗ ಪ್ರಶ್ನೋತ್ತರ....

SRI S. RAJENDRAN: I will conclude this sir.

ಅಧ್ಯಕ್ಷರು: ಕುಳಿತುಕೊಳ್ಳಿ. ಬೇರೆ ಬೇರೆ ವಿಷಯಗಳು ಇವೆ.

ಶ್ರೀ ಎಸ್. ರಾಜೇಂದ್ರನ್: ನಾನು ಕಂಕ್ಲೂಡ್ ಮಾಡುತ್ತೇನೆ.

ಅಧ್ಯಕ್ಷರು: ನೀವು ಕಂಕ್ಲೂಡ್ ಮಾಡಿ ಕೂತಿದ್ದೀರಲ್ಲಾ?

ಶ್ರೀ ಎಸ್. ರಾಜೇಂದ್ರನ್: ಇಲ್ಲ, ನಾನು ಕಂಕ್ಲೂಡ್ ಮಾಡಿಲ್ಲ. ಅವರು ಉತ್ತರ ಕೊಟ್ಟಿದ್ದರು.

ಅಧ್ಯಕ್ಷರು: ಏನಿದೆ ಮಿ. ರಾಜೇಂದ್ರನ್? ನೀವು ಜವಾಬ್ದಾರಿ ಇರತಕ್ಕಂಥ ಹಿರಿಯ ಸದಸ್ಯರಾಗಿ ಹೀಗೆ ಮಾಡಿದರೆ ಈ ಸದನ ನಡೆಸುವುದು ಹೇಗೆ?

ಶ್ರೀ ಎಸ್. ರಾಜೇಂದ್ರನ್: ಅಧ್ಯಕ್ಷರೇ, ತಮ್ಮ ಬಗ್ಗೆ ನನಗೆ ಅಪಾರ ಗೌರವ ಇದೆ. I will conclude my speech. I am very thankful to you for giving this opportunity. I will bring to the Government's notice, ನಿಜವಾಗಿ ಮಂತ್ರಿಗಳು ಇಂಟರ್‌ಫಿಯರ್ ಆಗಿ ಹೇಳಿದ್ದಾರೆ. ಕೆಲವು ಮಂತ್ರಿಗಳಿಗೆ ಎರಡು ಮೂರು ಪೋರ್ಟ್‌ಫೋಲಿಯೊಗಳು ಇವೆ. ಕೆಲವು ಮಂತ್ರಿಗಳಿಗೆ ಪೋರ್ಟ್‌ಫೋಲಿಯೋ ಇಲ್ಲ. ಆದ್ದರಿಂದ ಆ ಮಂತ್ರಿಗಳೆಲ್ಲಾ ಈ ಜಾಬ್‌ಗಳನ್ನೇ ತೆಗೆದುಕೊಂಡು ಅತಿಬೇಗ you must do the work for the people. ಬೇಕಾದಷ್ಟು ಪೋರ್ಟ್‌ಫೋಲಿಯೋಗಳು ಒಂದೇ ಕಡೆ ಇರುತ್ತದೆ. ಕೆಲವರಿಗೆ ಪೋರ್ಟ್‌ಪೋಲಿಯೋಗಳು ಇಲ್ಲ. The Government should distribute the work and do the needful to the people ಅಂತ ಹೇಳಿ ಅವಕಾಶ ಕೊಟ್ಟಿದ್ದಕ್ಕಾಗಿ ಸ್ವಾಮಿ – Thousand times I should be thankful to you. Thank you very much.

ಶ್ರೀಮತಿ ಭಾಗೀರಥಿ ಮರಳುಸಿದ್ದನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿ): ಮಾನ್ಯ ಅಧ್ಯಕ್ಷರೇ ಶೌಚಾಲಯ ವಿಚಾರ ಬಂದಾಗ ಅದರ ಬಗ್ಗೆ ನಾನು ಸ್ವಾಗತ ಮಾಡುತ್ತೇನೆ. ಆದರೆ ಅವರು ಇವತ್ತು ಮಾತನಾಡುವಾಗ* ಎನ್ನತಕ್ಕಂಥ ಪದ ಏನು ಬಳಸಿದ್ದಾರೆ, ಅದು ಅಸಂಸದೀಯ ಪದ ಅಲ್ಲದಿದ್ದರೂ ಕೂಡ ದಯವಿಟ್ಟು ಅದನ್ನು ಕಡತದಿಂದ ತೆಗೆಯಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು: ಆಯಿತು. ನೋಡಿ ತೆಗೆಸುತ್ತೇನೆ ಬಿಡಿ ತಾಯಿ.

ಶ್ರೀ ಎಸ್. ರಾಜೇಂದ್ರನ್: ಇಲ್ಲ, ಆ ಪದದಲ್ಲಿ ತಪ್ಪೇ ಇಲ್ಲ.

ಅಧ್ಯಕ್ಷರು: ರಾಜೇಂದ್ರನ್...

ಶ್ರೀಮತಿ ಭಾಗೀರಥಿ ಮರಳುಸಿದ್ದನಗೌಡ: ತಪ್ಪು ಮಾಡಿದ್ದೀರಿ ಎಂದು ನಾನು ಹೇಳುತ್ತಿಲ್ಲ...

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೇ, ಇದು ಸದನದಲ್ಲಿ ಜಂಬ ತರಹ ಮಾತನಾಡಬಾರದು. ನೋವು ಏನಿದೆ ಅದನ್ನು ನೋಡುವುದು ನಮ್ಮ ಹೆಣ್ಣು ಮಕ್ಕಳಲ್ಲಿ. ಈಗ ಜಂಬದಿಂದ ಮಾತನಾಡಬಹುದು. ನಮ್ಮಲ್ಲಿ ಪಾರಂಪರ್ಯ ಇಲ್ಲದಿದ್ದರೂ ಒಬ್ಬನು ಹೇಳುತ್ತಾನೆ.

ನಾನು ರಾಜ ಚೋಳರ ಪರಂಪರೆಯಿಂದ ಬಂದಿದ್ದೇನೆ ಎಂದು.

ಅಧ್ಯಕ್ಷರು: ಆಯಿತು ಬಿಡಿ. ಅದನ್ನು ನಾನು ನೋಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್: ಒಂದು ನಿಮಿಷ, ನಾನು ಮುಗಿಸಿಬಿಡುತ್ತೇನೆ. ಇನ್ನೊಬ್ಬರು ಹೇಳುತ್ತಾರೆ ಏನೆಂದರೆ ನನ್ನದು ಪಾರಂಪರ್ಯ ಇದೆ, ಟಿಪ್ಪು ಸುಲ್ತಾನ್ ಕಾಲದಲ್ಲಿ, ಕೃಷ್ಣ ದೇವರಾಯರ ಕಾಲದಲ್ಲಿ ಎಂದು ಇನ್ನೊಬ್ಬನಿಗೆ ನಿಮ್ಮ ಪಾರಂಪರ್ಯ ಏನು ಎಂದು ಕೇಳಿದರೆ ಅವನಿಗೆ ಯಾವುದೂ ಗೊತ್ತಿಲ್ಲ. ಆತ ಸುಮ್ಮನೆ ಇರುತ್ತಾನೆ. ಏನ್ರಿ ನಿಮ್ಮ ಪಾರಂಪರ್ಯ ಇಲ್ವಾ? ಬರೇ ಒಂದು ಲಾರ್ಜರ್ ಜನರೇಶನ್‌ನಲ್ಲಿ ನೀವು ಹುಟ್ಟಿ ಬಂದಿದ್ದೀರಾ ಎಂದರೆ ಅವನು ಜಂಬದಿಂದ ಏನು ಹೇಳಿದನು ಗೊತ್ತಾ? ನನ್ನ ಪಾರಂಪರ್ಯವನ್ನು ಮಹಾಭಾರತ ಕಾಲದಲ್ಲೇ ಕಿತ್ತು ಹಾಕಿಬಿಟ್ಟರು ಸ್ವಾಮಿ ಎಂದು. ಅಂತಹ ಪಾರಂಪರ್ಯಗಳು. ಇದು ಪಾರಂಪರ್ಯ ಬಗ್ಗೆ ಅಲ್ಲ. ಇದು ನೋವು. My women so far the Government ..... so many times I brought to their notice. They have Just constructed 240 toilets which is the one place located in K.G.F. Has the Women and Children Minister taken care? Will you take care today, you just remove that word from the records.

ಅಧ್ಯಕ್ಷರು: ಆಯಿತು.

ಶ್ರೀ ಎಸ್. ರಾಜೇಂದ್ರನ್: ಬರೇ ಮಾತಿಗೆ ಎಂದು ಹೇಳಬಾರದು. ಅಲ್ಲಿರತಕ್ಕಂಥ ಹೆಣ್ಣುಮಕ್ಕಳು ಟಾಯ್ಲೆಟ್‌ಗೆ ಹೋಗುವುದಕ್ಕೆ....

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ: ನೋಡಿ ಅವರು decency point of view ನಿಂದ ಹೇಳಿದ್ದಾರೆಯೇ ಹೊರತು ಬೇರೆ ಏನೂ ಇಲ್ಲ. Please, don't take it in that way. ಅದೇನೂ ತೆಗೆಯಲಿಲ್ಲ ಬಿಡಿ. ನೀವು ಹೇಳಿರುವುದೂ ಸರಿ, ಅವರು ಹೇಳಿರುವುದೂ ಸರಿ. ಕುಳಿತುಕೊಳ್ಳಿ.

12. ಪ್ರಶ್ನೋತ್ತರ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು: ಈಗ ಪ್ರಶ್ನೋತ್ತರ. ಶ್ರೀ ಕೃಷ್ಣ ಪಾಲೇಮಾರ್.... ಯೋಗೀಶ್ ಭಟ್‌ರವರೇ ಅವರ ಪರವಾಗಿ ನೀವು ಕೇಳುತ್ತೀರಾ?

ಶ್ರೀ ಎನ್. ಯೋಗೀಶ್ ಭಟ್: ಹೌದು.

ಅಧ್ಯಕ್ಷರು: ಕೇಳಿ.

(ಶ್ರೀ ಕೃಷ್ಣ ಪಾಲೇಮಾರ್ ಜೆ. ಅವರ ಪರವಾಗಿ ಶ್ರೀ ಎನ್. ಯೋಗೀಶ್ ಭಟ್ ಅವರು ಕೇಳಿದರು)

ಹಾಸನ-ಮಂಗಳೂರು ರೈಲು ಮಾರ್ಗದ ಕಾಮಗಾರಿ

107 (816) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) ಮಾನ್ಯ ಕೈಗಾರಿಕೆ ಮತ್ತು ಮೂಲ